THE BOOK WAS DRENCHED

TEXT FLY WITHIN THE BOOK ONLY

TEXT PROBLEM WITHIN THE BOOK ONLY

UNIVERSAL LIBRARY
OU_198279
UNIVERSAL LIBRARY

OSMANIA UNIVERSITY LIBRARY

Call No. K 915.4 Accession No. ~~K 1097~~ K 1545

Author K 47H

ಕುಲಕರ್ಣಿ, ಪ್ರಹ್ಲಾದ.

Title ರಾಜಹಂಸ.

This book should be returned on or before the date last marked below.

# ಮುನ್ನುಡಿ. Checked 1969

ವಿಜಯನಗರ ಸಾಮ್ರಾಜ್ಯದ ನೆನಪಾದೊಡನೆ, ಕನ್ನಡಿಗರು ಆ ಸಾಮ್ರಾಜ್ಯದ ಮೂಲಕ ಮಾಡಿದ ಎರಡು ಘನವಾದಕಾರ್ಯಗಳು ಕಣ್ಣ ಮುಂದೆ ಕಟ್ಟುತ್ತವೆ. ಅವು ಯಾವುವೆಂದರೆ (೧) ಅದು ಇಡಿ ಹಿಂದುಸ್ಥಾನ ದಲ್ಲಿಯ ಹಿಂದೂ ಸಂಸ್ಕೃತಿಯನ್ನು ಸಂರಕ್ಷಿಸಿದ್ದು. (೨) ಪರಕೀಯರ ದೌಡನ್ನು ಎಲ್ಲಕ್ಕೂ ಪ್ರಥಮ ತಡೆದು ಹಿಡಿಯುವುದರಲ್ಲಿ ಯಶಸ್ವಿಯಾ ದುದಲ್ಲದೆ, ಸಾಮ್ರಾಜ್ಯವನ್ನು ಮಿತಿಮೀರಿದ ಘನತೆಗೆ ಏರಿಸಿದ್ದು. ಆ ಸಾಮ್ರಾಜ್ಯವು ಹಿಂದೂ ಸಂಸ್ಕೃತಿಗೆ ಮಾಡಿದ ಉಪಕಾರದ ಸರಿ ಯಾದ ಕಲ್ಪನೆಯು ನಮಗೆ ಆಗಬೇಕಾದರೆ, ವಿಜಯನಗರ ಸಾಮ್ರಾ ಜ್ಯವು ಸ್ಥಾಪಿತವಾಗದಿದ್ದರೆ, ಧರ್ಮದ ಗಟ್ಟಿಮುಟ್ಟಿಯಾದ ತಳಹದಿಯ ಮೇಲೆ ಸ್ಥಿರವಾಗಿ ಸ್ಥಾಪಿತವಾಗದಿದ್ದರೆ ನಮ್ಮ ಹಿಂದುಸ್ಥಾನದ ಅವ ಸ್ಥೆಯು ಏನಾಗುತ್ತಿತ್ತೆಂಬುದರ ಚಿತ್ರವನ್ನು ಮನಸ್ಸಿನಲ್ಲಿ ತರಬೇಕು. ಶಿಕಂದರ ಬಾದಶಹನ ಕಾಲದಿಂದ ಹಿಂದುಸ್ಥಾನದ ಮೇಲೆ ಪರಕೀಯರ ದಾಳಿಗಳು ನೂರಾರು ಆದವು. ಆದರೆ ಅವುಗಳಲ್ಲೊಂದರಲ್ಲಿಯೂ ನಮ್ಮ ಹಿಂದೂ ಜನರಿಗೆ ಹೇಳತಕ್ಕ ಯಶಸ್ಸು ದೊರೆಯಲಿಲ್ಲವೆಂದು ದುಃಖದಿಂದ ಹೇಳಬೇಕಾಗುತ್ತದೆ. ಹಾಗಾಗುವುದಕ್ಕೆ ಕಾರಣಗಳು ಏನೇ ಇರಲಿ, ನಮಗೆ ಅಪಜಯವುಂಟಾದುದೇನೂ ಸುಳ್ಳಲ್ಲ. ಅದರ ಮೂಲಕ, ಇಡೀ ಉತ್ತರ ಹಿಂದುಸ್ಥಾನದ ನಡೆನುಡಿಗಳಲ್ಲಿ ವಿಲಕ್ಷಣವಾದ ಕ್ರಾಂತಿಯಾ ಯಿತು. ಉಡಿಗೆ ತೊಡಿಗೆ, ಆಚಾರವಿಚಾರ, ರೀತಿನೀತಿಗಳೆಲ್ಲವುಗಳಲ್ಲಿ ಮುಸಲ್ಮಾನರ ಅನುಕರಣವು ಸ್ವಾಭಾವಿಕವಾಗಿಯೇ ಮಾಡಲ್ಪಟ್ಟಿತು. ಮತ್ತು ವಿಜಯನಗರ ಸಾಮ್ರಾಜ್ಯವು ಸ್ಥಾಪನವಾಗದಿದ್ದರೆ, ಇಂದು ಈಗ ನಮ್ಮ ಕಣ್ಣಿಗೆ ತೋರುವ ಹಿಂದೂ ಜನರ ಹಿಂದುಸ್ಥಾನವು ಉಳಿ ಯುತ್ತಲೇ ಇರಲಿಲ್ಲ. ಇಂಥ ಇಕ್ಕಟ್ಟಿನ ಪರಿಸ್ಥಿತಿಯಲ್ಲಿ ಕೇವಲ ಆರ್ಯ ಸಂಸ್ಕೃತಿಯ ರಕ್ಷಣೆಯ ಉದಾತ್ತವಾದ ಉದ್ದೇಶವನ್ನೇ ಇಟ್ಟುಕೊಂಡು ಕಟ್ಟಲ್ಪಟ್ಟ ವಿಜಯನಗರ ಸಾಮ್ರಾಜ್ಯದ ಉಪಕಾರವನ್ನು ಇಡೀ ಹಿಂದು

ಸ್ಥಾನವು ಎಷ್ಟೆಂತು ಸ್ಮರಿಸಬೇಕು ? ಇದಾಯಿತು ಹಿಂದೂ ಸಂಸ್ಕೃತಿಯು ರಕ್ಷಣೆ. ಆದರೆ, ಈ ರಕ್ಷಣಕ್ಕೆ ಮೂಲಾಧಾರವು ಸಾಮ್ರಾಜ್ಯಸ್ಥಾಪನೆಯು. ಕ್ಷತ್ರಿಯತ್ವದ ಬೆಂಬಲವಿಲ್ಲದೆ ಸಂಸ್ಕೃತಿಯ ರಕ್ಷಣೆಯಾಗದು. ಸುಮಾರು ೧೫-೧೬ ನೂರು ವರ್ಷಗಳಿಂದ ಹಿಂದುಸ್ಥಾನವು ಪರಕೀಯರ ದಾಳಿಗಳಿಂದ ಜಜ್ಜಲ್ಪಟ್ಟು ನುಚ್ಚುನುರಿಯಾಗಿತ್ತು. ಅವರನ್ನು ತಡೆದು ಹಿಡಿಯಲು ಸಾಮರ್ಥ್ಯವು ಉತ್ತರ ಹಿಂದುಸ್ಥಾನದಲ್ಲಿ ಉಳಿದಿರಲಿಲ್ಲ. ಆ ಭಾಗದಲ್ಲಿ ಬಲಿಷ್ಠವಾದ ಒಂದೂ ಹಿಂದೂರಾಜ್ಯವು ಉಳಿದಿರಲಿಲ್ಲ. ಇಡೀ ಉತ್ತರ ಹಿಂದುಸ್ಥಾನವು ಮುಸಲ್ಮಾನರ ವಶವಾಗಿತ್ತು. ದಕ್ಷಿಣ ಹಿಂದುಸ್ಥಾನ ದಲ್ಲಿಯೂ ದೇವಗಿರಿ ವರಂಗಲ್ಲು ಮುಂತಾದ ಬಲಾಢ್ಯ ಸಾಮ್ರಾಜ್ಯಗಳು ಮುಸಲ್ಮಾನರ ಶೂರತನಕ್ಕೆ ಮತ್ತು ಕ್ರೂರತನಕ್ಕೆ ತುತ್ತಾಗಿದ್ದುವು. ಇಂಥ ದುರ್ಧರ ಪ್ರಸಂಗ ! ಶ್ರೀವಿದ್ಯಾರಣ್ಯರ ದಿವ್ಯತೇಜಸ್ಸಿ ನಿಂದಲೂ ಹುಕ್ಕಬುಕ್ಕರ ಅಪ್ರತಿಮವಾದ ಶೂರತನದಿಂದಲೂ ವಿಜಯನಗರದ ಸಾಮ್ರಾಜ್ಯವು ಸ್ಥಾಪನವಾದದ್ದು ಇಂತಹ ಭಯಂಕರ ಪ್ರಸಂಗದಲ್ಲಿ; ಎಂದ ಒಳಿಕ, ಇತಿಹಾಸದಲ್ಲಿ ಇದರ ಮಹತ್ವವನ್ನು ಎಷ್ಟೆಂದು ಬಣ್ಣಿಸಬೇಕು ? ನೆನಪಿನಲ್ಲಿಡತಕ್ಕ ಮತ್ತೊಂದು ವಿಶೇಷ ವೇನೆಂದರೆ, ಕರ್ನಾಟಕದ ಪುಣ್ಯದಿಂದ-ಭರತಭೂಮಿಯ ಪುಣ್ಯದಿಂದ ಕರ್ನಾಟಕವು ಸ್ಥಾಪಿಸಿದ ಈ ಘನವಾದ ಸಾಮ್ರಾಜ್ಯಕ್ಕೆ ಒಬ್ಬರಿಗಿಂತ ಒಬ್ಬರು ಉತ್ತಮರಾದ ಅರಸರು ಹಲವರು ದೊರೆತರು! ಹಾಗಾಗದೆ ಶ್ರೀ ಶಿವಾಜಿಮಹಾರಾಜರು ಸ್ಥಾಪಿಸಿದ ಮರಾಠಾ ಸಾಮ್ರಾಜ್ಯಕ್ಕೆ ದೊರೆ ತಂತೆ ದುರ್ಬಲ ಅಥವಾ ವಿಷಯಾಸಕ್ತ ಅರಸರು ಈ ಕರ್ನಾಟಕದ ಸಾಮ್ರಾಜ್ಯಕ್ಕೂ ದೊರೆತಿದ್ದರೆ, ಅದೂ ಶ್ರೀ ಶಿವಾಜಿಮಹಾರಾಜರು ಕಟ್ಟಿದ ಸಾಮ್ರಾಜ್ಯದಂತೆ ಬೇಗನೆ ಉರುಳಿ ಬೀಳುತ್ತಿತ್ತು! ಕರ್ನಾಟಕದಲ್ಲಿ ಹಾಗೆ ಆಗಲಿಲ್ಲ. ಇಷ್ಟೇ ಅಲ್ಲ; ಕಲ್ಪನಾತೀತವಾದ ವೈಭವದಿಂದ ಅದು ೨೦೦— ೨೫೦ ವರ್ಷಗಳ ವರೆಗೆ ಹಿಂದುಸ್ಥಾನದ ವಿಜಯಧ್ವಜವನ್ನು ಎತ್ತಿಹಿಡಿ ಯಿತು. ಶ್ರೀ ಶಿವಾಜಿಮಹಾರಾಜರು ಉಜ್ವಲವಾದ ದೇಶಾಭಿಮಾನದಿಂದ ರಾಜಕಾರಣದಲ್ಲಿ ಏರ್ಪಡಿಸಿದ ಅನೇಕ ಸುಧಾರಣೆಗಳ ಬೇರುಗಳನ್ನು

ನಾವು ನಮ್ಮ ಈ ಕರ್ನಾಟಕ ಸಾಮ್ರಾಜ್ಯದಲ್ಲಿ ಕಾಣಬಹುದು.

ಆದರೆ, ಇಂಥ ಈ ಸಾಮ್ರಾಜ್ಯದ ನೆನಪು ಮಾತ್ರ ಅದನ್ನು ಸ್ಥಾಪನ ಮಾಡಿದ ಕನ್ನಡಿಗರಿಗೆಯೇ ಉಳಿದಿರುವದಿಲ್ಲವೆಂಬುದು ಅತ್ಯಂತ ಲಜ್ಜಾಸ್ಪದವಾದ ಮಾತಲ್ಲವೆ? ಮರೆತುಬಿಟ್ಟ ಈ ಸಾಮ್ರಾಜ್ಯವನ್ನು ನಮಗೆ ನೆನಪು ಮಾಡಿಕೊಡಬೇಕು ಪರಕೀಯರು! ನೆನಪು ಮಾಡಿಕೊಟ್ಟರೂ ಮಾಡಿಕೊಳ್ಳದಿರುವಂಥ ಕೃತಘ್ನರು ಕನ್ನಡಿಗರಾದ ನಾವು! ಇದೇ ಸಾಮ್ರಾಜ್ಯವು ಮತ್ತೊಂದು ಪ್ರಾಂತದವರ ಪಾಲಿಗೆ ಬಂದಿದ್ದರೆ, ಅವರು ಇಡೀ ಭರತಖಂಡದಲ್ಲೆಲ್ಲ ಅದರ ವಿಜಯದುಂದುಭಿಯನ್ನು ಮೊಳಗಿಸಿ ಬಿಡುತ್ತಿದ್ದರು. ಅಷ್ಟೇಕೆ? ಅನ್ಯ ಪ್ರಾಂತದವರು ಕೈಕೊಂಡ ಈ ತರಹದ ಪ್ರಯತ್ನಗಳನ್ನು ಕರ್ನಾಟಕದವರೇ ಕೊಂಡಾಡಿ ಹರಸುತ್ತಾರೆ. ಅದೇ ಕರ್ನಾಟಕದವರು ತಮ್ಮ ಸಾಮ್ರಾಜ್ಯದ ನೆನಪು ಕೊಟ್ಟವರಿಗೆ ಮೂಗು ಮುರಿಯುತ್ತಾರೆ. ಇದಕ್ಕೇನ್ನಬೇಕು ಅಭಿಮಾನಶೂನ್ಯತೆಯ ಪರಮಾವಧಿ! ಆದರೆ, ನಮ್ಮ ಸುದೈವದಿಂದ ಇತ್ತೀಚೆಗೆ ಸ್ವಲ್ಪ ಸುಚಿಹ್ನಗಳು ತೋರ ಹತ್ತಿವೆ. ಅಲ್ಲಲ್ಲಿ ಕರ್ನಾಟಕತ್ವದ ಉದಯವು ಕಿಂಚಿತ್ ಕಾಣಲಾರಂಭಿಸಿದೆ. ಆದುದರಿಂದಲೇ, ವಿಜಯನಗರ ಸಾಮ್ರಾಜ್ಯವು ಸ್ಥಾಪನವಾದಂದಿನಿಂದ ೬೦೦ ವರುಷಗಳಾಗುವ ೧೯೩೬ ನೆಯ ಇಸ್ವಿಯಲ್ಲಿ ಬಹಳ ದೊಡ್ಡ ಪ್ರಮಾಣದಿಂದ ಪ್ರತ್ಯಕ್ಷ ವಿಜಯನಗರದಲ್ಲಿ ಅಂದರೆ ಹಾಳುಹಂಪೆಯಲ್ಲಿ ಸ್ಮಾರಕೋತ್ಸವ ಜರುಗಿಸುವ ಮಾತುಗಳುಹೊರಟಿವೆ. ದೇಶದಪರಿಸ್ಥಿತಿಯು ಅನುಕೂಲವಾದರೆ ಅದು ಯಶಸ್ವಿಯಾಗಿ ಜರುಗಬಹುದೆಂದು ಆಶಿಸುವೆ. ಕರ್ನಾಟಕಸ್ಥರು ಬೆಳಗಾವಿಯಲ್ಲಿ ನೆರೆದ ಕಾಂಗ್ರೆಸಿನ ಕಾಲದಲ್ಲಿ ವಿಜಯನಗರಸ್ಮಾರಕ ಪಟ್ಟಣವೊಂದನ್ನು ಕಟ್ಟಿ ಇಂಥಉಜ್ವಲವಾದ ಸ್ಮರಣೆಗೆಮೊದಲು ಮಾಡಿರುವರು. ಈಗ ಬೆಳಗಾವಿಯವರು ಈ ಭುವನೇಶ್ವರಿ ಗ್ರಂಥಮಾಲೆಯನ್ನು ಹೊರಡಿಸಿ ಮುಂದೆ ಮಾಡಲಿಚ್ಛಿಸುವ ಆ ಮಹೋತ್ಸವಕ್ಕೆ ಪ್ರಸ್ತಾವನೆಯನ್ನು ಮಾಡಿದುದಕ್ಕೋಸ್ಕರ ಅವರನ್ನು ಅಭಿನಂದಿಸಬೇಕಾಗಿದೆ. ಇರಲಿ,

ಹಾಳು ಹಂಪೆ! ಹಂಪೆಗೆ 'ಹಾಳು' ಎಂಬ ವಿಶೇಷಣವನ್ನು ಕೊಡು

ವಾಗ ನಮ್ಮ ಹೊಟ್ಟೆಯಲ್ಲಿ ಕಲಿವಿಲಿಯಾಗುತ್ತದೆ! ಆ ಹಾಳು ಹಂಪೆಯಲ್ಲಿ ಬೀಳುಬಿದ್ದ ಕನ್ನಡಿಗರ ಹೃದಯವನ್ನು ಹಸನಾಗಿ ಹರಗಿ ಫಲದ್ರೂಪವಾಗಿ ಮಾಡುವ ವಿಲಕ್ಷಣ ಶಕ್ತಿಯು ತುಂಬಿರುವುದೆಂಬದನ್ನು ಎಷ್ಟು ಜನರು ಬಲ್ಲರು! ಕನ್ನಡಿಗರೇ, ಒಮ್ಮೆ ಆ ಹಂಪೆಯನ್ನು ನೋಡಿ ಬನ್ನಿರಿ. ಎಂದರೆ ನೀವು ಹೊಸ ಮನುಷ್ಯರಾಗಿ ಬರುವಿರೆಂದು ಎದೆಗೆ ಕೈಗೊಟ್ಟು ಹೇಳುತ್ತೇವೆ. “ ಹಂಪೆಗೆ ಹೋಗುವದಕ್ಕಿಂತ ಕೊಂಪೆಯಲ್ಲಿರುವುದು ಲೇಸು ” ಎಂಬುದು ಹೇಡಿ ಕನ್ನಡಿಗರ ಗಾದೆಯ ಮಾತು. ಕಾಲಿದ್ದವನು ಹಂಪೆಗೆ ಹೋಗಬೇಕು, ಕಣ್ಣಿದ್ದವನು ಕನಕಗಿರಿಗೆ ಹೋಗಬೇಕು' ಎಂಬಹಳೆಯದೇ ಗಾದೆಯ ಮಾತು ಈಗಿನ ಹುರುಪಿನ ಕನ್ನಡಿಗರ ಗಾದೆಯ ಮಾತು. ಈ ಚಿಕ್ಕ ಪುಸ್ತಕಗಳನ್ನು ಓದಿ ಆ ವಿಜಯನಗರ ಸಾಮ್ರಾಜ್ಯದ ಚರಿತೆಯನ್ನೂ ವೈಭವವನ್ನೂ ಅರಿತುಕೊಳ್ಳಿರಿ. ನಡೆಯಿರಿ ಹಂಪೆಗೆ, ಕಾಲುದಣಿ ಹಂಪೆಯಲ್ಲಿ ತಿರುಗಾಡಿ ಮನದಣಿ ಆನಂದಬಡಿರಿ. ಈ ಚಿಕ್ಕ ಪುಸ್ತಕಗಳ ಉದ್ದೇಶವು ಇಷ್ಟೇ ಹೆಚ್ಚಿನದಿಲ್ಲ.

ಧಾರವಾಡ
೨೩-೬-೧೯೩೨

ಆಲೂರ ವೆಂಕಟರಾಯ.

# ಪ್ರಕಾಶಕರ ಮಾತು.

ಈ ವಿದ್ಯಾರಣ್ಯ ಪುಣ್ಯತಿಥಿಗೆ ನಮ್ಮ ಮಾಲೆಯು ಹೊರಟು ವರುಷ ವಾಯಿತು. ಚಂದಾದಾರರಿಗೆ ಮೊದಲ ವರ್ಷದ ನಾಲ್ಕು ಪುಸ್ತಕಗಳನ್ನು ಸಲ್ಲಿಸಿದಂತಾಯಿತು ೩--೪ ನೆಯ ಗ್ರಂಥಗಳು ಈ ಮೊದಲೇ ಪ್ರಸಿದ್ಧ ವಾಗಿ ಈ ದಿವಸ ಹೊಸ ವರುಷದ ಮೊದಲನೆಯ ಗ್ರಂಥವು ಹೊರಡ ಬೇಕಾಗಿತ್ತು. ಆದರೆ ಈ ಗ್ರಂಥಗಳನ್ನು ಬರೆಯಲಿಕ್ಕೆ ಸಹಾಯಕವಾದ ಕೆಲವು ಗ್ರಂಥಗಳು ವೇಳೆಗೆ ಸರಿಯಾಗಿ ದೊರೆಯಲಿಲ್ಲ. ವಿಜಯನಗರ ಸಾಮ್ರಾಜ್ಯ ಸ್ಥಾಪನೆಯ ದಿವಸವೆ ಗ್ರಂಥಗಳನ್ನು ಪ್ರಸಿದ್ಧಿಸಬೇಕೆಂದಿತ್ತು ಅದು ಸಾಧ್ಯವಾಗಲಿಲ್ಲ. ವಿದ್ಯಾರಣ್ಯ ಪುಣ್ಯತಿಥಿಯ ದಿವಸವಾದರೂ ವಿಜಯನಗರ ಸಾಮ್ರಾಜ್ಯದ ಇತಿಹಾಸವನ್ನು ಪ್ರಸಿದ್ಧಿಸಬೇಕೆಂಬ ಇಚ್ಛೆಯಾಯಿತು. ಹೀಗಾಗಿ ಹೊಸ ವರುಷದ ಪುಸ್ತಕವನ್ನಿಂದು ಕೊಡುವದಾಗಲಿಲ್ಲ.

ಹೊಸ ವರುಷದಿಂದ ನಾವು ಹೊಸ ಏರ್ಪಾಡು ಮಾಡಿರುವೆವು. ಈ ವರುಷದಲ್ಲಿ ಇಂತಿಷ್ಟೇ ಬೆಲೆಯ ಇಂತಿಷ್ಟೇ ಪುಸ್ತಕಗಳನ್ನು ತೆಗೆಯ ಬೇಕೆಂದು ಕಟ್ಟು ಇಟ್ಟುಕೊಂಡಿಲ್ಲ. ೧ ರೂಪಾಯಿ ಕೊಟ್ಟು ಮಾಲೆಯ ಚಂದಾದಾರರಾದವರಿಗೆ ಮಾಲೆಯಲ್ಲಿ ಹೊರಡುವ ಗ್ರಂಥಗಳೆಲ್ಲವನ್ನು ಮುಕ್ಕಾಲು ಬೆಲೆಗೆ ಕಳುಹುತ್ತ ಹೋಗುವೆವು. ನಮ್ಮ ಹೋದ ವರುಷದ ಚಂದಾದಾರರು ಮುಂದಿನ ವರುಷದಲ್ಲಿಯೂ ಚಂದಾದಾರರಾಗುಳಿದು ಹೊಸ ಚಂದಾದಾರರನ್ನು ಕೂಡಿಸಿಕೊಟ್ಟು ನೆರವಾಗುವರೆಂದು ನಂಬಿಯೇ ಈ ಮುಂದೆಯು ಮಾಲೆಯನ್ನು ನಡಿಸುವ ಸಾಹಸ ಮಾಡಿರುವೆವು.

ಈ ೩—೪ ನೆಯ ಗ್ರಂಥಗಳನ್ನು ಹೊರಡಿಸುವಲ್ಲಿ ನೆರವಾದ ನನ್ನ ಳೆಯರ ಹಾಗೂ ಇನ್ನಿತರ ಮಹನೀಯರ ಉಪಕಾರವನ್ನು ನಾನು

ಮರೆಯುವಂತಿಲ್ಲ. ನನ್ನ ಕೇಳಿಕೆಗೆ ಒಪ್ಪಿ, ಗೆ. ಬೋಳೆ, ಗೆ. ಕುಲಕರಣಿ ಪ್ರಹ್ಲಾದ ಇವರು ಗ್ರಂಥಗಳನ್ನು ಬರೆದುಕೊಟ್ಟರು. ಶ್ರೀ. ಆಲೂರ ವೆಂಕಟರಾಯರು ಮುನ್ನುಡಿಯಿಂದ ಇವನ್ನು ಸಿಂಗರಿಸಿದರು. ಜಯ ಕರ್ನಾಟಕ ಮಂಡಲದವರು "ಕುಯೋಗ ನಿವಾರಣೆ'' ಯ ಪಡಿಯಚ್ಚನ್ನು ಕೊಟ್ಟರು. ಗೆ. ಜಿ. ಎಸ್. ಹುದ್ದಾರ ಇವರು ನಕಾಶವನ್ನು ತೆಗೆದು ಕೊಟ್ಟರು. ಮಿ. ಪಿ. ಆರ್. ಪವಾರ ಕರ್ನಾಟಕ ಫೋಟೋ ಝಿಂಕೋ ವರ್ಕ್ಸ ಇವರು ವೇಳೆಗೆ ಸರಿಯಾಗಿ ಪಡಿಯಚ್ಚುಗಳನ್ನು ಮಾಡಿಕೊಟ್ಟರು. ಶ್ರೀ. ಪಂಡಿತ ವೆಂಕಟರಾಯರು ವೇಳೆಗೆ ಸರಿಯಾಗಿ ಮುದ್ರಿಸಿಕೊಟ್ಟರು. ಇವರೆಲ್ಲರ ಸಹಾಯವಿಲ್ಲದಿದ್ದರೆ ಸಂಕಲ್ಪಿಸಿದ ವೇಳೆಯಲ್ಲಿ ಈ ರೀತಿಯಲ್ಲಿ ಗ್ರಂಥಗಳನ್ನು ಹೊರಡಿಸಲಿಕ್ಕಾಗುತಿದ್ದಿಲ್ಲ. ಇವರ ಅಭಿನಂದನೆಯನ್ನು ಎಷ್ಟು ಮಾಡಿದರೂ ಕಡಿಮೆಯೆ.

ಭುವನೇಶ್ವರೀ ಗ್ರಂಥಮಾಲೆ,<br>ಬೆಳಗಾವಿ.<br>ಚಾಲುಕ್ಯ ವಿಕ್ರಮ ವರ್ಷ ೮೫೭.<br>ಜ್ಯೇಷ್ಠ ವದ್ಯ ತ್ರಯೋದಶಿ.<br>೧-೭-೧೯೩೨

ಬಿ. ಕಲ್ಯಾಣಶರ್ಮಾ.

# ರಾಘು ಹಂಪೆ.

( ೧ )

"ಹಂಪೆಗೆ ಹೋಗುವುದಕ್ಕಿಂತ ಕೊಂಪೆಯಲ್ಲಿರುವುದು ಲೇಸು" ಎಂದು ಆಸೊಂದು ನಾಣ್ಣುಡಿಯು ಕನ್ನಡದಲ್ಲಿ ರೂಢವಾಗಿದೆ. ವಾಸ ಸ್ಥಳವನ್ನು ಬಿಟ್ಟು ಎರಡನೆಯ ಕಡೆಗೆ ಹೋಗದ ಕೂಪಮಂಡೂಕ ವೃತ್ತಿಯ ಜನರು ತಮ್ಮ ಮನಸ್ಸಿನ ಸಮಾಧಾನಕ್ಕಾಗಿ ಆಡಿಕೊಂಡ ಮಾತಿದು. ಅಂತಹರಿಗೆ ಅವರ ಕೊಂಪೆಯೇ ಸ್ವರ್ಗ. ಆದರೆ ಅವರು ತಮ್ಮ ಮನಸಿನ ಸಮಾಧಾನಕ್ಕಾಗಿ ಮಾಡಿಕೊಂಡ ನಾಣ್ಣುಡಿಯಲ್ಲಿಯೇ ಆಗಲೊಲ್ಲದೇಕೆ ಹಂಪೆಯು ಇಂದಿಗೂ ವೈಭವಶಾಲಿ ಪಟ್ಟಣವಾಗಿ ಉಳಿದಿದೆ. ಅವರ ಮಾತು ಹೇಗೆಯೆ ಇರಲಿ ನಿಜವಾಗಿಯೂ ಇಂದು ಕೊಂಪೆಯಾಗಿರುವ ಹಂಪೆಯನ್ನು ನೋಡಬಯಸುವವರು ಅದೆಷ್ಟೋ ಜನ.

ಹಂಪೆಯು ಒಂದು ಕ್ಷೇತ್ರ. ರಾಮನ ಪಾದಸ್ಪರ್ಶದಿಂದ ಪುನೀತ ವಾದ ಸ್ಥಳ! ರಾಮಭಕ್ತನಾದ ಹನುಮಂತನ ಜನ್ಮಭೂಮಿ! ಸತಿಯನ್ನು ಕಳೆದುಕೊಂಡು ತೊಳಲುತಿದ್ದ ರಾಮನಿಗೆ ನೆರವಾಗಿ ಲಂಕೆಯ ಮೇಲೆ ದಂಡೆತ್ತಿ ಹೋಗಿ ಸೀತಾರಾಮರನ್ನು ಕೂಡಿಸಿದ ಸುಗ್ರೀವನ ರಾಜಧಾನಿಯ ಸ್ಥಳವದು! ಆ ಸ್ಥಳದ ದರ್ಶನ ಮಾತ್ರ ದಿಂದ ರಾಮಾಯಣವು ಕಣ್ಣಮುಂದೆ ಕಟ್ಟಿದಂತಾಗಿ ಮನುಷ್ಯನು ತನ್ನ ವ್ಯಕ್ತಿತ್ವವನ್ನೇ ಮರೆತುಬಿಡುವನು. ಆ ರಾಮಾಯಣದ ವ್ಯಕ್ತಿಗಳೇ ತಾನಾಗಿ ಮಾನಸಿಕ ಸುಖದುಃಖಗಳನ್ನು ಭೋಗಿಸುವನು! ಆನಂದಪರವಶನಾಗಿ ಕುಣಿದಾಡುವನು!

ಇನ್ನೊಂದೇನೆಂದರೆ ಹಂಪೆಯು ಕರ್ಣಾಟಕಸಾಮ್ರಾಜ್ಯವೆಂದು ಪ್ರಸಿದ್ಧಿವಡೆದ ವಿಜಯನಗರ ಸಾಮ್ರಾಜ್ಯದ ರಾಜಧಾನಿ ಸ್ಥಳ. ಈಗಿನ ಹೊಸಪೇಟೆಯ ಆಚೆಗಿರುವ ವಿಜಯನಗರದ ದಕ್ಷಿಣ ಕಡೆಯ ಹೊರಕೋಟೆಯಿಂದ ಆನೆಗುಂದಿಯ ಉತ್ತರದ ಕೋಟೆಯಗೋಡೆಯ ವರೆಗೆ ದಕ್ಷಿಣೋತ್ತರ ೧೨ ಮೈಲು ಉದ್ದ, ಪಶ್ಚಿಮದ ಕೋಟೆಯ ಗೋಡೆಯಿಂದ ಪೂರ್ವಕ್ಕೆ ಕಂಪಲಿಯ ನೆರೆಯಲ್ಲಿರುವ ಗುಡ್ಡಗಳ ವರೆಗೆ ೧೦ ಮೈಲು ಪೂರ್ವಪಶ್ಚಿಮ ಅಗಲುಳ್ಳ ಪ್ರದೇಶದಲ್ಲಿ ಎಂದರೆ ೧೨೦ ಚೌರಸ ಮೈಲು ಕ್ಷೇತ್ರದಲ್ಲಿ ಆ ರಾಜಧಾನಿಯ ಅವಶಿಷ್ಟ ಭಾಗಗಳು ಕಂಡುಬರುತ್ತವೆ. ಆ ಹಾಳು ಪಟ್ಟಣದಲ್ಲಿ ಅಲ್ಲಲ್ಲಿ ಕಂಡುಬರುವ ಗುಡಿಗುಂಪಾರಗಳಿಂದಲೂ ಅರಮನೆಯ ಕುರುಹುಗಳಿಂದಲೂ ಅದರ ವೈಭವಕಾಲದ ಸ್ಥಿತಿಯನ್ನು ಕಲ್ಪಿಸಬಹುದಾಗಿದೆ! ಇದು ನಮ್ಮ ಸಾಮ್ರಾಜ್ಯದ ರಾಜಧಾನಿಯ ಸ್ಥಳವೆಂದು ಹೆಮ್ಮೆ ಪಡಬಹುದಾಗಿದೆ! ಈ ರೀತಿ ಹಂಪೆಯು ರಾಮಾಯಣ ಕಾಲವನ್ನೂ ೧೪-೧೫ ಶತಮಾನ ಗಳ ಕರ್ಣಾಟಕದ ವೈಭವವನ್ನೂ ನೆನಪಿಗೆ ತಂದುಕೊಟ್ಟು ನೋಡ ಬಂದವರಲ್ಲೊಂದು ಹೊಸ ಚೈತನ್ಯವನ್ನೇ ತುಂಬಿಬಿಡುತ್ತದೆ.

ಹಂಪೆ ಎಂಬುದು ತುಂಗಭದ್ರಾ ನದಿಯ ದಕ್ಷಿಣ ತೀರದಲ್ಲಿ ರುವ ಒಂದು ಹಳ್ಳಿ. ಬಳ್ಳಾರಿ ಜಿಲ್ಲೆಯ ಹೊಸಪೇಟೆ ತಾಲೂಕಿಗೆ ಸೇರಿದಂತಹದು. ಪಂಪಾಪತಿಯ ಸನ್ನಿಧಾನದಲ್ಲಿ ಮನೆಮಾಡಿಕೊಂಡಿ ರುವ ಪೂಜಾರಿಗಳು, ಒಬ್ಬಿಬ್ಬರು ಸೇವಕರು ಇವರಷ್ಟೇ ಹಂಪೆಯ ಇಂದಿನ ನಿವಾಸಿಗಳು. ತುಂಗಭದ್ರಾನದಿಗೆ ಪೂರ್ವಕಾಲದಲ್ಲಿ ಪಂಪಾ ಎಂದು ಹೆಸರಿದ್ದಿತು. ಆ ನದಿಯ ದಕ್ಷಿಣ ದಂಡೆಯಲ್ಲಿರುವ ಈಶ್ವರ ಲಿಂಗಸಿಗೆ ಪಂಪಾಪತಿಯೆಂದು ಹೆಸರುಬಂದು ಅದರ ನೆರೆಯಲ್ಲಿ ರುವ ಹಳ್ಳಿಗೂ ಪಂಪಾ ಎಂದೇ ಹೆಸರಾಯಿತು. ಪಂಪಾ ಶಬ್ದದ

ಮೊದಲ ಪಕಾರವು ಹೊಸಗನ್ನಡದಲ್ಲಿ ಹಕಾರವಾಗಿ ಹಂಪೆಯಾಯಿತು. ಈ ಹಂಪೆಯು ಸಬಂಧವಾಗಿ ಇನ್ನೊಂದು ಆಖ್ಯಾಯಿಕೆಯೂ ಉಂಟು. "ಬ್ರಹ್ಮನಿಗೆ ಪಂಪಾ ಎಂಬ ಮಗಳಿದ್ದಳು. ಅವಳು ಹೇಮಕೂಟದಲ್ಲಿ ವಾಸವಾಗಿರುವ ಋಷಿಗಳಿಗೆ ಗಡ್ಡೆಗೆಣಸುಗಳನ್ನೂ ಹಣ್ಣುಹಂಪಲಗಳನ್ನೂ ತಂದುಕೊಟ್ಟು ಸೇವೆಮಾಡಿಕೊಂಡಿರುತಿದ್ದಳು. ಅವಳನಚ್ಚಿನ ಸೇವೆಗೆ ಮೆಚ್ಚಿ ಋಷಿಗಳು ನಿನ್ನ ಮನದಲ್ಲಿದ್ದುದನ್ನು ಬೇಡಿಕೊಳ್ಳು ಕೊಡುವೆವೆಂದರು. ಆಗವಳು ವಿರೂಪಾಕ್ಷನನ್ನು ವರಿಸುವ ಇಚ್ಛೆಯಿದೆ ಎಂದೆನಲು ಋಷಿಗಳು "ತಥಾಸ್ತು" ಎಂದರು. ಆ ಋಷಿಗಳು ಕೊಟ್ಟ ವರಕ್ಕನುಸರಿಸಿ ವಿರೂಪಾಕ್ಷನು ಪಂಪಾದೇವಿಯನ್ನು ವರಿಸಿ ಪಂಪಾಪತಿಯೆಂಬ ನಾಮಾಭಿಧಾನವನ್ನು ಪಡೆದನು. ಆ ಹೆಸರಿನಿಂದಲೇ ಈಗಲೂ ಪೂಜೆಗೊಳ್ಳುತ್ತಿರುವನು. ಈ ಪಂಪಾಪತಿಯ ಹೆಸರಿನಿಂದಲೇ ಆ ಪ್ರದೇಶಕ್ಕೆ ಹಂಪೆಯೆಂದು ಹೆಸರಾಯಿತು." ಎಂಬುದೇ ಆ ಆಖ್ಯಾಯಿಕೆ.

( ೨ )

ಹಂಪೆಗೆ ಹೋಗಬೇಕೆಂಬುವವರು ಮದ್ರಾಸ ಸದರ್ನಮರಾಠಾ ರೇಲ್ವೆಯ ಗುಂತಕಲ್ಲು-ಹುಬ್ಬಳ್ಳಿ ಹಾದಿಯ ಮೇಲಿರುವ ಹೊಸಪೇಟೆ ಸ್ಟೇಶನಿಗೆ ಇಳಿಯಬೇಕು. ಹುಬ್ಬಳ್ಳಿಯನ್ನು ಬಿಟ್ಟರೆ ಇದು ೧೩ನೆಯ ಸ್ಟೇಶನು. ಗುಂತಕಲ್ಲು ಬಿಟ್ಟರೆ ೧೨ನೆಯ ಸ್ಟೇಶನು. ಗುಂತಕಲ್ಲಿನಿಂದ ೭೧ ಮೈಲು, ಹುಬ್ಬಳ್ಳಿಯಿಂದ ೮೯ ಮೈಲು ಅಂತರದ ಮೇಲಿದೆ. ಹಂಪೆಯನ್ನು ನೋಡಬಯಸುವವರು ಈ ಸ್ಟೇಶನಿಗಿಳಿದು ಕಮಲಾಪುರದ ಪ್ರವಾಸಿಗಳ ಬಂಗಲೆಗೆ ಹೋಗಬೇಕು. ಕಮಲಾಪುರ ಬಂಗಲೆಯು ಹೊಸಪೇಟೆ ಸ್ಟೇಶನಿನಿಂದ ೭ ಮೈಲು ದೂರ. ಸ್ಟೇಶನಿನಿಂದ ಅಲ್ಲಿಗೆ ಹೋಗುವುದಕ್ಕೆ ಜಟ್ಕಾಗಳು ದೊರೆಯುತ್ತವೆ. ಸ್ಟೇಶನಿನಿಂದ ಅರ್ಧ ಮೈಲಿನ ಮೇಲೆ ಹೊಸಪೇಟೆ ಊರು ಇರುತ್ತದೆ.

ಇದು ವಿಜಯನಗರದ ಅರಸರಲ್ಲಿ ಎಲ್ಲಕ್ಕೂ ಹೆಚ್ಚು ಪ್ರಸಿದ್ಧಿಪಡೆದ ಕೃಷ್ಣದೇವರಾಯನಿಂದ ಸ್ಥಾಪಿತವಾದುದು. ತಾರುಣ್ಯದಲ್ಲಿ ನಾಗಲಾದೇವಿಯೆಂಬ ಸ್ತ್ರೀಯು ಕೂಡ ಕೃಷ್ಣದೇವರಾಯನ ಸಂಬಂಧವಿತ್ತೆಂತಲೂ, ಪಟ್ಟಕ್ಕೆ ಕುಳಿತ ಮೇಲೆ ಆ ಸ್ತ್ರೀಯನ್ನು ಮದುವೆಯಾಗಿ ಅವಳ ಪ್ರೇಮದ ಕುರುಹಾಗಿ ಈ ಪಟ್ಟಣವನ್ನು ಕಟ್ಟಿ ನಾಗಲಾಪುರವೆಂಬ ಹೆಸರು ಕೊಟ್ಟನೆಂತಲೂ, ರಾಯನು ಹೆಚ್ಚಾದಕಾಲ ಈ ಪಟ್ಟಣದಲ್ಲಿಯೇ ಇರುತ್ತಿದ್ದನೆಂತಲೂ ಆಖ್ಯಾಯಿಕೆಯಿದೆ. ಕೃಷ್ಣರಾಯನಿಗೆ ನಾಗಲಾದೇವಿ ಹೆಸರಿನ ಹೆಂಡತಿಯಿದ್ದಳೆಂಬುದು ಇತಿಹಾಸದ ಆಧಾರದಿಂದ ಇನ್ನೂ ಸಿದ್ಧವಾಗಿಲ್ಲ. ರಾಯನ ತಾಯಿಯ ಹೆಸರು ನಾಗಲಾದೇವಿ. ಅವಳ ಸ್ಮಾರಕವಾಗಿಯೇ ಈ ಪಟ್ಟಣವನ್ನು ಕಟ್ಟಿರಬೇಕೆಂದು ನಮ್ಮ ಅಭಿಪ್ರಾಯ.

ಹೊಸಪೇಟೆಯಲ್ಲಿ ನೋಡತಕ್ಕಂಥ ಹಿಂದಿನ ಅವಶೇಷಗಳೇನೂ ಇರುವುದಿಲ್ಲ. ಆದರೆ ಅದರ ಪಶ್ಚಿಮದಿಕ್ಕಿಗೆ ಎರಡು ದಿನ್ನೆಗಳ ನಡುವೆ ಕೃಷ್ಣರಾಯನು ಕಟ್ಟಿಸಿದ ವಿಸ್ತಾರವಾದುದೊಂದು ಕೆರೆಯ ಕುರುಹು ಕಂಡುಬರುತ್ತದೆ. ಈ ಕೆರೆಯನ್ನು ಕಟ್ಟುವಾಗ ದಿನಾಲು ೧೫--೨೦ ಸಾವಿರ ಜನರು ದುಡಿಯುತ್ತಿದ್ದರೆಂದೂ, ಕಟ್ಟುವಾಗ ಎರಡು ಮೂರು ಸಾರೆ ಒಡೆದುಹೋಗಲು ರಾಯನು ಬ್ರಾಹ್ಮಣರನ್ನು ಕರೆಸಿ ದೇವರಿಗೆ ಕೌಲುಕಟ್ಟಿಸಿ ವಿಚಾರಿಸಲು, ಮುಖ್ಯ ದೇವತೆಯು ಕ್ಷುಬ್ಧವಾಗಿರುವುದರಿಂದ ಮನುಷ್ಯರನ್ನೂ ಕೋಣ ಕುದುರೆಗಳನ್ನೂ ಬಲಿಕೊಡುವುದಾಗಿ ಹೇಳಿದರೆಂತಲೂ, ಆಪ್ರಕಾರ ರಾಯನ ಆಜ್ಞೆಯಿಂದ ಸೆರೆಮನೆಯಲ್ಲಿದ್ದ ಜೀವದಂಡನೆಯ ಶಿಕ್ಷೆಗೆ ಪಾತ್ರರಾದ ೬೦ ಗಂಡಸರು ಅನೇಕ ಕುದುರೆಕೋಣಗಳು ಬಲಿಯಾದುವೆಂತಲೂ ಪೇಜನು ಬರೆದಿರುವನು ಈ ಕೆರೆಯಿಂದ ಬತ್ತದ ಗದ್ದೆಗಳಿಗೂ

ತೋಟಪಟ್ಟಿಗಳಿಗೂ ನೀರು ಪೂರೈಸಲ್ಪಡುತ್ತಿದ್ದಿತು. ಒಂಬತ್ತು ವರ್ಷಗಳವರೆಗೆ ಈ ಕೆರೆಯ ನೀರು ನೀರಿನ ತೆರಿಗೆಯನ್ನು ತೆಗೆದುಕೊಳ್ಳದೆ ಪೂರೈಸಲ್ಪಡುತ್ತಿದ್ದಿತೆಂತಲೂ ತರುವಾಯ ಈ ಕೆರೆಯಿಂದ ಬರುವ ನೀರಿನ ತೆರಿಗೆಯ ಉತ್ಪನ್ನವು ೨೦ ಸಾವಿರ ಹೊನ್ನುಗಳಷ್ಟು ಇದ್ದಿತೆಂತಲೂ ನೂನೀಜನು ಬರೆದಿರುವನು. ಕೆರೆಯ ಕಟ್ಟುವಿಕೆಯು ಜೋವಾವೊಡಲ್ಲಾ--ಪಾಂಟೆ ಎಂಬ ಪೋರ್ಚುಗೀಜ ಶಿಲ್ಪಿಯ ದೃಷ್ಟಿಪಥದಲ್ಲಾಯಿತಂತೆ. ಹೊಸಪೇಟೆಯಿಂದ ಹಡಗಲಿ ಹರಪನಹಳ್ಳಿ ಕೂಡಲಗಿ ಕಡೆಗೆ ಹೋಗುವ ದೊಡ್ಡ ಮಾರ್ಗದ ಬದಿಯಲ್ಲಿ ಈ ಹಾಳು ಕೆರೆಯನ್ನು ಈಗಲೂ ಕಾಣಬಹುದು.

ಹೊಸಪೇಟೆಯಿಂದ ಕಮಲಾಪುರಕ್ಕೆ ಹೋಗುವ ಲೈನಮಾರ್ಗವೇ ಮುಂಚಿನ ಕಾಲದ ರಾಜಮಾರ್ಗ. ಆ ಕಾಲದಲ್ಲಿದು ಬಹು ವಿಸ್ತಾರವಾಗಿದ್ದಿತು. ಹಾದಿಕಾರರಿಗೆ ಬಿಸಿಲು ತಗುಲದಂತೆ ಎರಡೂ ಬದಿಯಲ್ಲಿ ದೊಡ್ಡದೊಡ್ಡ ಮರಗಳನ್ನು ಬೆಳೆಸಿದ್ದರು. ರಾಜಮಾರ್ಗದ ಎರಡೂ ಬದಿಯಲ್ಲಿ ಮನೆಗಳೂ ಅಂಗಡಿಗಳೂ ಇದ್ದುವಂತೆ. ಆ ಅಂಗಡಿಗಳಲ್ಲಿ ನಾನಾತರದ ವಸ್ತುಒಡವೆಗಳು ದೊರೆಯುತ್ತಿದ್ದುವಂತೆ. ಈಗ ನೋಡಿದರೆ ಅವೇತರ ಕುರುಹೂ ಇರುವುದಿಲ್ಲ. ರಣಗುಟ್ಟುವ ಬಿಸಿಲಿನಲ್ಲಿಯೇ ಹೋಗಬೇಕು. ಹಂಪೆಯನ್ನು ನೋಡಬಂದ ಪ್ರವಾಸಿಗಳಿಗೆ ಆ ಮರಡಿಯ ಬಿಸಿಲಿನ ಸೌಖ್ಯವು ದೊರೆತರೆ ಅವರಿಂದ ಸಹಜವೇ ಉದ್ಗಾರ ಹೊರಡಬಹುದು "ಹಂಪೆಗೆ ಹೋಗುವುದಕ್ಕಿಂತ ನಮ್ಮ ಕೊಂಪೆಯಲ್ಲಿರುವುದು ಲೇಸು!" ಎಂದು.

ಹೊಸಪೇಟೆಯಿಂದ ಒಂದು ಮೈಲಿನ ಅಂತರದಲ್ಲಿ ಬೀದಿಯ ಬದಿಯಲ್ಲಿ ಅನಂತಶಯನಗುಡಿಯೆಂಬ ಹಳ್ಳಿಯೊಂದು ಹತ್ತುವುದು. ಆ ಊರ ದಕ್ಷಿಣದಿಕ್ಕಿನಲ್ಲಿ ಅನಂತಶಯನನ ವಿಸ್ತಾರವಾದ ಗುಡಿ

ಯೊಂದಿದೆ. ಆ ಗುಡಿಯಿಂದಲೇ ಊರಿಗೆ ಅನಂತಶಯನಗುಡಿಯೆಂಬ ಹೆಸರು ಬಂದುದು. ಹಂಪೆಯ ಹಾಳುಗುಡಿಗುಂಡಾರಗಳನ್ನು ನೋಡುವುದಕ್ಕಾಗಿಯೇ ಬಂದ ಪ್ರವಾಸಿಗಳಲ್ಲಿ ಈ ವಿಸ್ತಾರವಾದ ಗುಡಿಯನ್ನು ನೋಡುವ ಕುತೂಹಲವು ಹೆಚ್ಚುವುದು ಸ್ವಾಭಾವಿಕ. ಗುಡಿ ನೋಡಬೇಕೆಂದು ಹತ್ತರ ಹೋಗುವುದೊಂದೇ ತಡ. ನೆರೆಯಲ್ಲಿಯೇ ಆಡುತಿದ್ದ ಹುಡುಗರು ಪ್ರವಾಸಿಗಳಿಗೆ ಗುಡಿ ತೋರಿಸಲು ನಾಮುಂದೆ ನೀಮುಂದೆ ಎಂದು ನೆಗೆಯುವರು. ಅವರು ಹಾಗೆ ಓಡಿಬರುವುದು ಇದು ತಮ್ಮೂರ ಗುಡಿ ನೋಡಿರಿ ಹೇಗಿದೆ! ಎಂಬ ಹೆಮ್ಮೆಯಿಂದಲ್ಲ. ಪ್ರವಾಸಿಗಳಿಗೆ ಗುಡಿಯ ಭಾಗವನ್ನೆಲ್ಲ ತೋರಿಸಿದಮೇಲೆ ಅವರಿಂದ ದೊರೆವ ಒಂದು ಬಿಲ್ಲೆಯ ಮೇಲೆ ಅವರ ಲಕ್ಷ್ಯ. ಆ ಮಕ್ಕಳ ಸಹಾಯದಿಂದ ಗುಡಿಯ ಎಲ್ಲ ಭಾಗವನ್ನೂ ನೋಡಿದಮೇಲೆ ಬಿಲ್ಲಿಯೊಂದನ್ನು ಕೊಡಿರೆಂದು ಕೈಮುಂದೆ ಮಾಡುವ ಅವರಿಗೆ ಬಿಲ್ಲಿ ಕೊಡದವರಾದರೂ ಯಾರು? ಗುಡಿಯ ಒಳಭಾಗವನ್ನು ಪ್ರವೇಶಿಸಿದರೆ ಅದೆಲ್ಲಿಯೂ ಹಾರಾಡುವ ಕಣ್ಣುಕಪ್ಪಡಿ! ಅವುಗಳ ಮಲಮೂತ್ರಗಳ ದುರ್ಗಂಧ! ಗುಡಿಯ ವಿಸ್ತಾರವನ್ನು ನೋಡಿಯೇ ಪ್ರವಾಸಿಗಳು ಬೆರಗಾಗುವರು. ಗುಡಿಯಲ್ಲಿ ನೋಡತಕ್ಕಂಥ ಕಲಾಕುಸುರಿಯ ಕೆಲಸವೇನೂ ಇಲ್ಲ. ಆದರೆ ಅದರ ಕಮಾನಿನಾಕೃತಿಯ ಛತ್ತು. ಗಚ್ಚಿನ ಮೇಲ್ಮಾಳಿಗೆಯ ರಚನೆಯೂ ಆಶ್ಚರ್ಯಕರವಾಗಿವೆ. ಈ ಗುಡಿಯನ್ನು ಕಟ್ಟಿಸಿದವರಾರೆಂಬುದು ತಿಳಿದು ಬಂದಿಲ್ಲ. ನಾಗಲಾಪುರದಿಂದ ವಿಜಯನಗರಕ್ಕೆ ಹೋಗುವ ರಾಜಮಾರ್ಗದಲ್ಲಿ ಒಂದು ವಿಸ್ತಾರವಾದ ಗುಡಿಯನ್ನು ಕೃಷ್ಣರಾಯನು ಕಟ್ಟಿಸಿದನೆಂದು ಪೀಜನು ಬರೆದಿರುತ್ತಾನೆ. ಅದೇ ಈ ಗುಡಿಯಿರಬೇಕೆಂದು ಅನುಮಾನಿಸಬಹುದಾಗಿದೆ. ಈ ಗುಡಿಯಲ್ಲಿ ಮೂರ್ತಿಯೇ ಇಲ್ಲ. ಹಂಪೆಯ ಯಾವ

ದೊಂದು ಗುಡಿಯಲ್ಲಿ ಮೂರ್ತಿಯಿಲ್ಲವೆಂದಕೂಡಲೆ ಅದು ಮುಸಲ್ಮಾನರಿಂದ ಒಡೆಯಲ್ಪಟ್ಟಿರಬೇಕೆಂದು ಒಮ್ಮೆಲೆ ತಿಳಿದುಕೊಳ್ಳುತ್ತಾರೆ. ಈ ಗುಡಿಯ ವಿಷಯ ಹಾಗಿದ್ದಂತೆ ತೋರುವುದಿಲ್ಲ. ಗುಡಿಯಲ್ಲಿ ದೇವರ ಮೂರ್ತಿ ಇರದಿರುವುದಕ್ಕೆ ಆ ಪ್ರದೇಶದಲ್ಲಿ ಬೇರೊಂದು ಬಗೆಯ ಹೇಳಿಕೆಯಿದೆ. "ಗುಡಿಯು ಕಟ್ಟಿ ಆದಮೇಲೆ ಅನಂತಶಯನನನ್ನು ಕರೆತರುವುದಕ್ಕಾಗಿ ಒಬ್ಬನನ್ನು ಕಳುಹಿದರು. ಅವನು ದೇವರಿಗೆ ಬೆಟ್ಟಿಯಾಗಿ 'ಸ್ವಾಮಿಾ, ನಿಮ್ಮ ಸಲುವಾಗಿ ಸಿದ್ಧವಾದ ಹೊಸ ಗುಡಿಗೆ ಬರಬೇಕೆ'ಂದು ಬಿನ್ನಹ ಮಾಡಿಕೊಂಡನು. ದೇವರು ಅದಕ್ಕೆ ಒಪ್ಪಿ ನೀನು ನನ್ನದೊಂದು ಹೇಳಿಕೆಯಂತೆ ನಡೆದರೆ ನಿನ್ನ ಕೂಡ ಬರುವೆನೆಂದು ಹೇಳಿದನು. ಕರೆಯಲು ಹೋದ ಮನುಷ್ಯನು ಅದಾವುದೆಂದು ಕೇಳಲು 'ನಾನು ನಿನ್ನ ಕೂಡ ಬರುತ್ತೇನೆ ಆದರೆ ನೀನು ಮುಂದೆ ಹೋಗುವವನು ತಿರುಗಿ ನನ್ನನ್ನು ನೋಡಕೂಡದೆ'ಂದು ಕಟ್ಟು ಮಾಡಿದನು. ಅವನು ಅದಕ್ಕೆ ಒಪ್ಪಿ ಮುಂದೆಮುಂದೆ ನಡೆದನು. ದೇವರು ಆತನ ಹಿಂದೆ ಬರುತ್ತಿದ್ದನು. ಆದರೆ ಮುಂದಿನ ಮನುಷ್ಯನಿಗೆ ದೇವರು ಬರುತ್ತಾನೊ ಇಲ್ಲವೊ ನೋಡಬೇಕೆಂಬ ಹಂಬಲ. ಕೆಲಹೊತ್ತು ಗಟ್ಟಿ ಮನಸು ಮಾಡಿ ನಡೆದನು. ಮುಂದೆಮುಂದೆ ಹೋದಂತೆ ನೋಡುವ ಇಚ್ಛೆಯು ಪ್ರಬಲಿಸುತ್ತ ಹೋಯಿತು. ಅದನ್ನಾವರಿಸುವುದಾಗಲಿಲ್ಲ. ತಿರುಗಿ ನೋಡಿಯೇ ಬಿಟ್ಟನು. ಅದೆಲ್ಲಿ ಆ ಮನುಷ್ಯನು ತಿರುಗಿ ನೋಡಿದನೋ ಅಲ್ಲಿಯೆ ದೇವರು ಕಲ್ಲಾಗಿ ಬಿದ್ದುಬಿಟ್ಟನು. ಮನುಷ್ಯನು ಬೇಡಿಕೊಂಡು ಹೇಳಿಕೊಂಡುದರ ಪರಿಣಾಮವೇನೂ ಆಗಲಿಲ್ಲ. ಕರೆಯಲು ಹೋದ ಮನುಷ್ಯನು ಪಶ್ಚಾತ್ತಾಪಬಟ್ಟು ಹಳಹಳಿಸುತ್ತ ತನ್ನನ್ನು ತಾನೇ ಬಯ್ದುಕೊಳ್ಳುತ್ತ ಊರಿಗೆ ಬಂದನು. ದೇವರು ಕಲ್ಲಾದ ಸ್ಥಳವು ಹಡಗಲಿ ತಾಲೂಕಿನ ಹೋಲಲು ಎಂಬ

ಊರಹತ್ತಿರವಂತೆ. ಆ ಸ್ಥಳವಲ್ಲೀಗ ಅನಂತಶಯನನ ದೇವಾಲಯವೂ ಇದೆ. ಹೋಲಲು ಅನಂತಶಯನನ ಮೂರ್ತಿಯು ಆ ಪ್ರದೇಶವಲ್ಲಿಯೂ ದೊರೆಯುವ ಕಲ್ಲಿನಲ್ಲಿ ಕಡೆದುದಿರುವುದೇನೋ ನಿಜ. ಇದರ ಮೇಲಿಂದ ಆ ಮೂರ್ತಿಯನ್ನು ಬೇರೆ ಕಡೆಯಿಂದ ತಂದಿರಬೇಕೆಂಬುದು ವ್ಯಕ್ತವಾಗುತ್ತದೆ. ಇಷ್ಟರ ಮೇಲಿಂದ ಮೇಲಿನ ಆಖ್ಯಾಯಿಕೆಯು ಸರಿಯಾಗಿದೆಯೆಂದು ಮಾತ್ರ ಹೇಳಿದಂತಾಗಲಿಲ್ಲ. ಅನಂತಶಯನನ ಗುಡಿಯು ಕಟ್ಟಿದ ಮೇಲೆ ಮೂರ್ತಿಯನ್ನು ಸ್ಥಾಪಿಸಬೇಕೆಂದಿರುವಷ್ಟರಲ್ಲಿ ಏನಾದರೂ ಅಡ್ಡಿಯಾಗಿ ಹಾಗೆಯೇ ಉಳಿದಿರಬೇಕು, ಇಲ್ಲವೆ ಪರಚಕ್ರಗಳಿಂದಾದ ದಾಳಿಯಲ್ಲಿ ಸಾಮ್ರಾಜ್ಯವು ಸಿಕ್ಕಿರಬೇಕು. ಎಂದು ಊಹಿಸಬಹುದಾಗಿದೆ.

ಹೊಸಪೇಟೆಯಿಂದ ನಾಲ್ಕನೆಯ ಮೈಲುಕಲ್ಲಿನಹತ್ತಿರ ಹಾದಿಯ ಎಡಬದಿಗೆ ಕಲ್ಲಿನಲ್ಲಿ ಕಟ್ಟಿತೆಗೆದ ಒಂದು ಬಾವಿಯಿದೆ. ಅದಕ್ಕೆ ಸೂಳೆಯಬಾವಿಯೆಂದು ಹೆಸರು. ಪ್ರವಾಸಿಗಳ ಅನುಕೂಲತೆಗಾಗಿ ವೇಶ್ಯೆಯೊಬ್ಬಳು ಈ ಬಾವಿಯನ್ನು ಕಟ್ಟಿಸಿ ತೆಗೆದಳೆಂದು ಹೇಳುವರು.

ಹೊಸಪೇಟೆಯಿಂದ ನಾಲ್ಕೂವರೆ ಮೈಲು ಅಂತರದಲ್ಲಿ ವಿರೂಪಾಕ್ಷನ ದೇವಾಲಯಕ್ಕೆ ಹೋಗುವ ದಾರಿಯೊಂದು ಒಡೆಯುತ್ತದೆ. ವಿರೂಪಾಕ್ಷನ ದರ್ಶನವನ್ನು ತೆಗೆದುಕೊಂಡೇ ಉಳಿದ ಸ್ಥಳಗಳನ್ನು ನೋಡಬೇಕೆಂಬ ಧಾರ್ಮಿಕ ಭಾವನೆಯುಳ್ಳವರು ಈ ದಾರಿಯಿಂದ ವಿರೂಪಾಕ್ಷನ ದೇವಾಲಯಕ್ಕೆ ಹೋಗಬಹುದು. ಆದರೆ ಸುರಕ್ಷಿತವಾದ ಸ್ಥಳದಲ್ಲಿಳಿದುಕೊಂಡು ಆಮೇಲೆ ನೋಡಬೇಕಾದುದನ್ನು ನೋಡಿಕೊಳ್ಳೋಣ ಎಂಬುವವರೂ ಜಟ್ಕಾಗಾಡಿಯಲ್ಲಿ ಕುಳಿತುಕೊಂಡು ಸುಖಪ್ರವಾಸ ಮಾಡಬಯಸುವವರೂ ಕಮಲಾಪುರದ ಬಂಗಲೆಗೆಯೇ ಹೋಗುವರು.

ಕಮಲಾಪುರದ ನೆರೆಯಲ್ಲಿ ಹಾದಿಗೆ ಹೊಂದಿಯೇ ಸುಂದರವಾದ

ಕೆರೆಯೊಂದು ದೃಷ್ಟಿಗೆ ಬೀಳುವುದು. ಪುಟನೆಗೆವ ಮೀನುಗಳಿಂದಲೂ ಈಸುವ ನೀರುಗೋಳಿಗಳಿಂದಲೂ ಕಂಗೊಳಿಸುವ ಆ ಕೆರೆಯನ್ನು ನೋಡುತ್ತ ಕಮಲಾಪುರದ ಬಂಗಲೆಯನ್ನು ಸೇರಬಹುದು. ಕಮಲಾ ಪುರದ ಬಂಗಲೆಯೆಂದರೆ ಅದೊಂದು ಪೂರ್ವದ ಹಾಳುಗುಡಿ. ಬಳ್ಳಾರಿ ಜಿಲ್ಲೆಯ ಕಲೆಕ್ಟರರಾಗಿದ್ದ ಮಿ. ಜೆ. ಎಚ್. ಮಾಸ್ಟರ ಎಂಬವರು ಅದರಲ್ಲಿ ಯೋಗ್ಯವಾದ ಸುಧಾರಣೆಗಳನ್ನು ಮಾಡಿ ಪ್ರವಾಸಿಗಳ ಸಲುವಾಗಿ ಸಾರ್ವಜನಿಕ ವಿಶ್ರಾಂತಿಗೃಹವನ್ನಾಗಿ ಮಾಡಿದರು. ಆ ಬಂಗಲೆಯಲ್ಲಿ ಪ್ರವಾಸಿಗಳ ಆದರೋಪಚಾರಗಳನ್ನು ಮಾಡಲಿಕ್ಕೆ ಆಳು ಗಳೂ ಇರುವರು. ಪ್ರವಾಸಿಗಳಿಗಲ್ಲಿ ಅಡಿಗೆಯ ಸಾಮಾನುಗಳೂ ದೊರೆಯುವುವು. ಆದರೆ ಅಲ್ಲಿ ದೊರೆವ ಸಾಮಾನುಗಳೆಂದರೆ ಹಾಲು ತತ್ತಿ ಅಕ್ಕಿ ಮಾಂಸಗಳಷ್ಟೆ. ಹೆಚ್ಚಿನವೇನಾದರೂ ಬೇಕೆಂಬುವವರು ಹೊಸಪೇಟೆಯನ್ನು ಬಿಡುವಾಗಲೇ ಸಂಗ್ರಹಿಸಬೇಕು.

( ೩ )

ಕಮಲಾಪುರ ಬಂಗಲೆಯಿಂದ ಸುಮಾರು ೩೫೦ ಯಾರ್ಡಿನ ಅಂತರದಲ್ಲಿಯೇ ನಗರದ ಮುಖ್ಯ ಕೋಟೆಯಗೋಡೆಯು ದೃಷ್ಟಿಗೆ ಬೀಳುತ್ತದೆ. ವಿಜಯನಗರದ ಸುತ್ತಲು ಒಂದರ ಹೊರಗೊಂದು ಏಳು ಕೋಟೆಗಳಿದ್ದುವೆಂದು ಅಬ್ದುಲ್ ರಝಾಕನು ಬರೆದಿರುವನು. ಈ ಏಳು ಕೋಟೆಗಳು ಕೆಳಗೆ ಹೇಳಿದಂತಿದ್ದುವೆಂದು ಸಿವೆಲ್‌ರವರು ತಮ್ಮ ಫಾರಗಾಟನ್‌ಎಂಪಾಯರದಲ್ಲಿ ಬರೆದಿರುವರು — “ಹೊಸಪೇಟೆಯ ಆಚೆಗೆ ಬೆಟ್ಟದನಡುವೆ ಕಿಂಡಿಯೊಂದಿದ್ದು ಅಲ್ಲಿ ಕೋಟೆಯ ಗೋಡೆಯ ಹಾಗೂ ಮಹಾದ್ವಾರದ ಅವಶೇಷಗಳು ಕಂಡು ಬರುತ್ತವೆ. ಪೀಜನೂ ಇದರ ಉಲ್ಲೇಖ ಮಾಡಿರುವನು. ಇದೇ ಮೊದಲ ಕೋಟೆ. ಹೊಸಪೇಟೆಯ ಹತ್ತರ ಎರಡನೆಯ ಕೋಟೆಯಿದ್ದಿತು. ಹೊಸಪೇಟೆಯನ್ನು

ದಾಟಿ ಉತ್ತರಕ್ಕೆ ಮೂರನೆಯ ಕೋಟೆಯಿದ್ದಿತು. ಅಬ್ದುಲ್ ರಜ್ಜಾಕನ ಕಾಲದಲ್ಲಿ ಹೊಸಪೇಟೆಯಲ್ಲಿ ವಿಶೇಷ ಜನವಸ್ತಿಯಿರಲಿಲ್ಲ. ಮುಂದೆ ರಾಜಧಾನಿಯ ಮಾರ್ಗದ ಎರಡೂ ಬದಿಗೆ ಅಂಗಡಿಗಳೂ ಮನೆಗಳೂ ಹೆಚ್ಚಾಗುತ್ತ ಹೋಗಿದ್ದುವು. ನಾಲ್ಕನೆಯ ಕೋಟೆಯು 'ಮಲ್ಲಪ್ಪನ ಗುಡಿ' ಎಂಬ ಹಳ್ಳಿಯ ಈಚೆಗಿದ್ದಿತು. ಈ ಕೋಟೆಯ ಅಗಸೆಯ ಬಾಗಿಲು ವಿಶೇಷ ಭದ್ರವಾಗಿದ್ದಿತು. ಇದೂ, ಹಳೆಯ ಕಲ್ಲಿನ ಕಟ್ಟಡದ ಅವಶೇಷಗಳೂ ಒಂದು ಕಟ್ಟಿ ತೆಗೆದ ಬಾವಿಯೂ ಇನ್ನೂ ದೃಷ್ಟಿಗೆ ಬೀಳುವುವು. ಯಾವನೊಬ್ಬ ಸರದಾರನು ತನ್ನ ತೋಟದಲ್ಲಿ ತೆಗೆಸಿದ ಬಾವಿಯಾಗಿರಬೇಕಿದು. ಐದನೆಯ ಕೋಟೆಯು ಈ ಹಳ್ಳಿಯ ಉತ್ತರಕ್ಕಿದೆ. ಅದರ ಮುಖ್ಯ ಮಹಾದ್ವಾರವು ಇನ್ನೂ ಗಟ್ಟಿಮುಟ್ಟಾಗಿದೆ. ಆದರೆ ಕೋಟೆಯ ಗೋಡೆಗಳು ಮಾತ್ರ ಬಿದ್ದಿವೆ. ಆರನೆಯ ಕೋಟೆಯು ಕಮಲಾಪುರದ ಕೆರೆಯ ದಕ್ಷಿಣಕ್ಕೆ ಅದಕ್ಕೆ ಹೊಂದಿಯೇ ಇದೆ. ಏಳನೆಯ ಒಳಕೋಟೆಯು ಅರಮನೆಯ ಸುತ್ತಲೂ ಕಟ್ಟಲ್ಪಟ್ಟದು. ಅದಿನ್ನೂ ಒಳ್ಳೇ ಭದ್ರವಾಗಿದೆ.''

ಕಮಲಾಪುರದಿಂದ ೨೫೦ ಯಾರ್ಡಿನ ಮೇಲೆ ಹತ್ತುವುದು ಮುಖ್ಯ ನಗರದ ಸುತ್ತಲಿರುವ ಆರನೆಯ ಕೋಟೆ. ಈ ಕೋಟೆಯ ಗೋಡೆಗಳಿನ್ನೂ ಗಟ್ಟಿಮುಟ್ಟಾಗಿವೆ. ಕೋಟೆಗೆ ಈಗಲೂ ಎರಡು ಅಗಸೆಗಳಿದ್ದುದು ಕಂಡುಬರುತ್ತದೆ ಇನ್ನೂ ಕೆಲವು ಅಗಸೆಗಳಿದ್ದರೂ ಇರಬಹುದು. ಕಮಲಾಪುರದಿಂದ ಬರುವಾಗ ಹತ್ತುವ ಗೋಡೆಯ ಪೂರ್ವದಿಕ್ಕಿನಲ್ಲಿ ಸುಮಾರು ಒಂದು ಮೈಲು ದೂರದಲ್ಲಿ ಗುಮ್ಮಟಾಕೃತಿಯ ಅಗಸೆಯೊಂದಿದೆ. ಉತ್ತರಕ್ಕೆ ತುಂಗಭದ್ರಾತೀರದ ತಳಾರಿ ಗಟ್ಟಕ್ಕೆ ಹೋಗುವ ಮಾರ್ಗದಲ್ಲಿ ಇನ್ನೊಂದು ಅಗಸೆಯಿರುವುದು. ಇದರ ಕೆಳಭಾಗವು ಹಿಂದೂಪದ್ಧತಿಯಿಂದ ಕಟ್ಟಿದುದಿದ್ದರೂ ಮೇಲ್ಭಾಗ

ದಲ್ಲಿ ಮುಸಲ್ಮಾನ ಶಿಲ್ಪವು ಕಂಡು ಬರುತ್ತದೆ. ವಿಜಯನಗರದ ಅರಸರ ಕೈಕೆಳಗಿರುವ ಮುಸಲ್ಮಾನ ಸಿಪಾಯಿಗಳಿಂದ ಸುಧಾರಿಸಲ್ಪಟ್ಟುದರಿಂದ ಈ ಸ್ಥಿತಿಯಾಗಿರಬಹುದು.

ನಗರದ ಮುಖ್ಯಭಾಗದಲ್ಲಿ ನೋಡತಕ್ಕವುಗಳೆಂದರೆ ಅರಮನೆಯ ಕುರುಹುಗಳು. ಅರಮನೆಯ ಸುತ್ತಲಿರುವ ಕೋಟೆಗೆ ಹೊಂದಿ ಸಮೀಪದಲ್ಲಿ ಅರಸಿಯರ ಸ್ನಾನಗೃಹ, ಅಷ್ಟಕೋಣಾಕೃತಿಯ ಜಲಾಶಯ ಮೊದಲಾದುವುಗಳಿವೆ. ಮುಖ್ಯವಾಗಿ ಇವು ಅರಮನೆಗೆ ನೀರಿನ ಪೂರೈಕೆ ಮಾಡುವಂತಹವಿರಬೇಕು. ನೆರೆಯಲ್ಲಿಯೇ ಚಂದ್ರಶೇಖರನ ಗುಡಿಯಿದೆ. ಹಾಗೆಯೆ ಮುಂದೆಸಾಗಿ ಅರಮನೆಯ ಕೋಟೆಯ ಒಳಹೊಕ್ಕರೆ ವಿಜಯಗೃಹವೂ ಅರಮನೆಯೂ ಓಲಗದ ಮನೆಯೂ ದೃಷ್ಟಿಗೆ ಬೀಳುವುವು. ಹೀಗೆಂದಾಕ್ಷಣ ಕಟ್ಟಡಗಳನ್ನೇ ನಾವು ನೋಡುವೆವಾಗಿ ಯಾರೂ ತಿಳಿಯಕೂಡದು. ನಮ್ಮ ದೃಷ್ಟಿಗೆ ಬೀಳುವುದು ಆ ಕಟ್ಟಡಗಳ ಗಚ್ಚಿನ ನೆಲಗಟ್ಟು ಮಾತ್ರ. ಎಲ್ಲಿ ನೋಡಿದಲ್ಲಿ ಬಂಗಾರದ ತಗಡುಗಳಿಂದಾಚ್ಛಾದಿತವಾಗಿದ್ದ ಆ ಕಂಬಗಳು, ಗೋಡೆಗಳು, ತೊಲೆಜಂತೆಗಳು ವಿಜಯನಗರವು ಹಾಳಾಗಿ ಮುನ್ನೂರರವತ್ತು ವರುಷಗಳ ಮೇಲೆಯೂ ಅಲ್ಲಿ ಉಳಿಯೆಂದರೆ ಹೇಗೆ ಉಳಿಯಬೇಕು! ಮುಸಲ್ಮಾನ ಸೈನಿಕರು ನಗರವನ್ನು ಸುಲಿದೊಯ್ಯುವಾಗ ಕೈಗೆ ದೊರೆತ ಆ ಅರಮನೆಯ ಗೋಡೆಯ ಒಂದೊಂದು ಕಲ್ಲುಗಳನ್ನೇ ತೆಗೆದುಕೊಂಡು ಹೋಗಿರಬಹುದು. ಅವರು ತೃಪ್ತರಾಗಿ ಹೋದ ಮೇಲೆ ಉಳಿದುದನ್ನು ನೆರೆಯ ಪ್ರದೇಶದಲ್ಲಿರುವ ಜನರೂ ಒಯ್ದಿರಬಹುದು. ಚಂದ ಕಂಡ ಕಲ್ಲುಗಳನ್ನೂ ಬಿಟ್ಟಿಪ್ಪರಲ್ಲ ನಮ್ಮ ಜನ. ಊರಲ್ಲಿರುವ ಹಾಳು ಗುಡಿಗುಂಡಾರಗಳ ಉತ್ತಮೋತ್ತಮ ಕಲ್ಲುಗಳನ್ನೊಯ್ದು ತಮ್ಮ ಮನೆಕಟ್ಟೆಗಳಿಗೆ ಹಾಕಿಕೊಂಡುದನ್ನು ನಾವು ನೋಡುವುದಿಲ್ಲವೆ? ವಿಜಯ

ನಗರವನ್ನು ಈ ರೀತಿ ಛಿನ್ನವಿಚ್ಛಿನ್ನವಾಗಿ ಮಾಡಿದ ಪೂರ್ಣದೋಷವನ್ನು ಮುಸಲ್ಮಾನರ ಮೇಲೆಯೇ ಹೊರಿಸುವುದಕ್ಕೆ ನಾವು ಸಿದ್ಧರಿಲ್ಲ. ಸ್ವಲ್ಪಿಲ್ಲ ಸ್ವಲ್ಪ ಭಾಗವಾದರೂ ನೆರೆಯ ಪ್ರದೇಶದ ಹಿಂದುಗಳಿಂದಲೂ ಹಾಳಾಗಿರಬೇಕು. ಮತ್ತೆ ಕೆಲಭಾಗವು ಮಳೆಗಾಳಿಗೆ ತುತ್ತಾಗಿರಬೇಕು. ಅದು ತಮ್ಮ ಹಿಂದೂ ಸಾಮ್ರಾಜ್ಯದ ಮುಖ್ಯನಗರವೆಂದು ಯಾವ ಹಿಂದೂರಾಯನೂ ಕಾಯ್ದುಕೊಳ್ಳಲು ಪ್ರಯತ್ನಿಸಿಲ್ಲ. ಮುಖ್ಯವಾಗಿ ಐತಿಹಾಸಿಕ ಸ್ಥಳಗಳನ್ನೂ ವಸ್ತುಗಳನ್ನೂ ಅವು ತಮ್ಮಲ್ಲಿರುವ ಬೆಲೆಯುಳ್ಳ ವಸ್ತುಗಳೆಂದು ಕಾಯ್ದುಕೊಳ್ಳುವ ಬುದ್ಧಿಯು ನಮ್ಮಲ್ಲಿ ಇನ್ನೂ ಬರಬೇಕಾಗಿದೆ!

ವಿಜಯಗೃಹದ ಕುರುಹಿಗೀಗ ಮಹಾನವಮಿದಿಬ್ಬ ಎನ್ನುತ್ತಾರೆ. ಕೋಟೆಯ ಒಳಭಾಗದಲ್ಲಿ ನೋಡತಕ್ಕ ಸ್ಥಳಗಳಲ್ಲಿ ಇದರಷ್ಟು ಎತ್ತರವಾದುದೂ ಸುಂದರವಾದುದೂ ಬೇರೊಂದಿಲ್ಲ. ವಿಜಯನಗರದಲ್ಲಾಗುತ್ತಿದ್ದ ಪ್ರಸಿದ್ಧವಾದ ನವರಾತ್ರಿಯ ಉತ್ಸವವು ಈ ಕಟ್ಟಡದಲ್ಲಾಗುತಿದ್ದಿತು. ಇದೊಂದೇ ಉತ್ಸವವಲ್ಲ. ರಾಜರಿಂದ ಸಾರ್ವಜನಿಕವಾಗಿ ನಡಿಸಲ್ಪಡುತ್ತಿದ್ದ ಪ್ರತಿಯೊಂದು ಉತ್ಸವವೂ ಈ ಸ್ಥಳದಲ್ಲಿಯೇ ಜರಗುತಿದ್ದಿತೆಂದು ತೋರುತ್ತದೆ. ಪೀಜನು ಈ ವಿಜಯಗೃಹದಲ್ಲಿ ನಡೆಯುತಿದ್ದ ನವರಾತ್ರಿಯ ಉತ್ಸವವನ್ನು ಸೊಗಸಾಗಿ ವರ್ಣಿಸಿರುವನು. ಅದನ್ನೋದುವುದರಿಂದ ಈ ಕಟ್ಟಡದ ಸೌಂದರ್ಯವೂ ಅಲ್ಲಿ ನಡೆಯುತ್ತಿದ್ದ ನವರಾತ್ರಿ ಉತ್ಸವದ ನೋಟವೂ ಕಣ್ಣಮುಂದೆ ಕಟ್ಟಿದಂತಾಗುತ್ತದೆ. ಈಗುಳಿದ ತಳದ ಕಟ್ಟೆಯ ಸುತ್ತಲೂ ಅನೇಕ ಸುಂದರವಾದ ಮೂರ್ತಿಗಳು ನೋಡಲು ದೊರೆಯುತ್ತವೆ. ಒಂದೊಂದು ಸಾಲಿನಲ್ಲಿ ಒಂದೊಂದು ವಿಧವಾದ ಕೆತ್ತಿಗೆಯ ಕೆಲಸ! ಒಂದು ಸಾಲಿನಲ್ಲಿ ನರ್ತನಮಾಡುವ ನರ್ತಕಿಯರು; ಇನ್ನೊಂದು ಸಾಲಿನಲ್ಲಿ

ಕ್ರೂರವಾದ ವನ್ಯಪಶುಗಳ ಕೂಡ ಹೋರಾಡುವ ಜಟ್ಟಿ; ಬೇರೊಂದು ಸಾಲಿನಲ್ಲಿ ಆನೆಗಳ ಮೆರವಣಿಗೆ! ಇವೆಲ್ಲವೂ ಆ ವಿಜಯಗೃಹದಲ್ಲಾಗುವ ನವರಾತ್ರಿಯಕಾಲದ ಉತ್ಸವವನ್ನು ತೋರಿಸುವಂತಹವು. ಕಟ್ಟೆಯ ಎಲ್ಲಕ್ಕೂ ಮೇಲ್ಭಾಗದಲ್ಲೊಂದು ಕಡೆಗೆ ಓಕುಳಿಯಾಡುವ ಸ್ತ್ರೀಪುರುಷರ ಮೂರ್ತಿಗಳನ್ನು ಕೆತ್ತಿದುದು ಕಂಡುಬರುವುದು. ಇದು ಹೋಲಿಕೋತ್ಸವವನ್ನು ತೋರಿಸುವಂತಹದಿರಬೇಕು. ಇದರಮೇಲಿಂದಲೇ ನಗರದಲ್ಲಿ ರಾಜರಿಂದ ಸಾರ್ವಜನಿಕವಾಗಿ ನಡಿಸಲ್ಪಡುತ್ತಿದ್ದ ಉತ್ಸವಗಳೆಲ್ಲವೂ ವಿಜಯಗೃಹದಲ್ಲಿಯೇ ಜರಗುತಿರಬೇಕೆಂದು ನಾವು ಹೇಳಿದುದು. ಈ ವಿಜಯಗೃಹವನ್ನು ಕೃಷ್ಣದೇವರಾಯನು ಉತ್ಕಲ ಪ್ರಾಂತದಮೇಲೆ ವಿಜಯಯಾತ್ರೆ ಹೊರಟು ವಿಜಯಿಯಾಗಿ ತಿರುಗಿ ಬಂದಮೇಲೆ ಕಟ್ಟಿಸಿದನಂತೆ. ಈ ವಿಜಯಗೃಹದ ಉತ್ತರದಿಕ್ಕಿನ ಗೋಡೆಯ ಕೆಳಬದಿಯಲ್ಲಿ ದಾರಿಗೆ ಹೊಂದಿ ದೊಡ್ಡದೊಂದು ಕಲ್ಲುಬಾಗಿಲು ಬಿದ್ದಿದೆ. ಅದೊಂದು ಅಖಂಡವಾದ ಬಂಡೆಯಲ್ಲಿ ಕಡೆದು ತೆಗೆದ ಬಾಗಿಲವಿದ್ದರೂ ಅದರಲ್ಲಿ ಮಾಡಿದ ಕೆಲಸವು ಕಟ್ಟಿಗೆಯಲ್ಲಿ ಕೆತ್ತಿದಷ್ಟು ಸೂಕ್ಷ್ಮವಾಗಿದೆ. ಇದು ಯಾವ ಕಟ್ಟಡದ ಕದವೆಂಬುದನ್ನು ಹೇಳಲಿಕ್ಕೆ ಬರುವಂತಿಲ್ಲ. ಇದರ ಜೊತೆಕದವು ಎಲ್ಲಿದೆಯೆಂಬುದೂ ಗೊತ್ತಾಗಿಲ್ಲ.

ವಿಜಯಗೃಹದ ನೆರೆಯಲ್ಲಿಯೇ ಪಶ್ಚಿಮದಿಕ್ಕಿನಲ್ಲಿ ರಾಜರು ಇರುವುದಕ್ಕಾಗಿ ಕಟ್ಟಿಸಿದ ಅರಮನೆಯ ಕಟ್ಟಡದ ಕುರುಹು. ಅದನ್ನು ದಾಟಿ ಹಾಗೆಯೆ ವಾಯುವ್ಯದಿಕ್ಕಿಗೆ ಸಾಗಿದರೆ ವಿಸ್ತೀರ್ಣವಾದುದೊಂದು ದೊಡ್ಡ ಕಟ್ಟೆಯು ದೃಷ್ಟಿಗೆ ಬೀಳುವುದು. ಮೇಲ್ಭಾಗದಲ್ಲೆಲ್ಲ ಗಚ್ಚಿನ ನೆಲಗಟ್ಟು ಇನ್ನೂ ಅಚ್ಚಳಿಯದೆ ಇದೆ. ನಿನ್ನೆಯೊ ಮೊನ್ನೆಯೊ ಗಚ್ಚಿನ ನೆಲಗಟ್ಟು ಮಾಡಿರಬೇಕೆಂದೆನಿಸುತ್ತದೆ. ಮೂನ್ನೂರು

ಮುನ್ನೂರೈವತ್ತು ವರ್ಷಗಳವರೆಗೆ ಮಳೆಗಾಳಿಯನ್ನು ತಿಂದರೂ ಈ ಗಚ್ಚಿನ ನೆಲಗಟ್ಟು ಹಾಗೆ ಅಚ್ಚಳಿಯದೆ ಇದ್ದುದನ್ನು ನೋಡಿದರೆ ಅದನ್ನು ನಿರ್ಮಿಸಿದ ಶಿಲ್ಪಿಗಳ ಚಾತುರ್ಯವನ್ನು ನೆನೆದು ಅಚ್ಚರಿಯಾಗುತ್ತದೆ! ವಿಜಯನಗರದಲ್ಲಿರುವ ಅರಮನೆಯ ಎಲ್ಲ ಭಾಗದ ನೆಲಗಟ್ಟೂ ಇದೇ ಪ್ರಕಾರ ಅಚ್ಚಳಿಯದೆ ಇದೆ. ಈ ಕಟ್ಟೆಯೆಂದರೆ ಓಲಗದ ಮನೆಯ ನೆಲಗಟ್ಟು. ನೆಲಗಟ್ಟಿನ ಮೇಲ್ಭಾಗವನ್ನು ಪರೀಕ್ಷಿಸುವಲ್ಲಿ ಅಲ್ಲಿರುವ ಗುರುತುಗಳಿಂದ ಒಂದೊಂದು ಸಾಲಿನಲ್ಲಿ ಹತ್ತಕ್ಕಿಂತ ಕಡಿಮೆಯಲ್ಲದಷ್ಟು ಕಂಬಗಳುಳ್ಳ ಕನಿಷ್ಠಪಕ್ಷ ೬ ಸಾಲುಗಳಾದರೂ ಇರಬೇಕೆಂದು ಕಂಡುಬರುತ್ತದೆ. ವಿಜಯನಗರದ ಕಟ್ಟಡದ ಕುರುಹುಗಳನ್ನು ನೋಡಿದರೆ ಇದರಷ್ಟು ವಿಸ್ತಾರವಾದುದು ಮತ್ತಾವುದೂ ಇಲ್ಲ. ನಗರದಲ್ಲಿ "ಇದರಷ್ಟು ಎತ್ತರವಾದ ಕಟ್ಟಡವು ಬೇರೊಂದಿಲ್ಲ" ವೆಂದು ಅಬ್ದುಲ್‌ರಝಾಕನು ಬರೆದಿರುವನು. ಇದರ ಮುಂದೆ ಕೆಲಅಂತರದ ಮೇಲೆ ೪೧॥ ಫೂಟುಗಳಷ್ಟು ಉದ್ದ ೩ ಫೂಟುಗಳಷ್ಟು ಅಗಲ ೨ ಫೂಟು ೯ ಇಂಚುಗಳಷ್ಟು ಆಳವಾದ ಒಂದೇ ಕಲ್ಲಿನಲ್ಲಿ ಕಟೆದ ಡೋಣಿಯಿದೆ. ಇದು ಪರಸ್ಥಳದಿಂದ ಬಂದ ರಾಯಭಾರಿಗಳ ಹಾಗೂ ಇನ್ನಿತರರ ಆನೆಕುದುರೆ ಮೊದಲಾದುವುಗಳಿಗೆ ನೀರು ಕುಡಿಸುವುದಕ್ಕಾಗಿ ಕಟ್ಟಿಸಲ್ಪಟ್ಟುದಾಗಿರಬೇಕು.

ಈ ಓಲಗದ ಮನೆಯ ನೈಋತ್ಯದಿಕ್ಕಿನಲ್ಲಿ ಒಂದು ಸುತ್ತುಗೋಡೆಯ ಪ್ರದೇಶವು ದೃಷ್ಟಿಗೆ ಬೀಳುತ್ತದೆ. ಇಲ್ಲಿ ಟಂಕಸಾಲೆಯಿದ್ದಿತೆಂದು ಹೇಳುತ್ತಾರೆ. ಈ ಟಂಕಸಾಲೆಯಲ್ಲಿ ಬಂಗಾರದ ನಾಣ್ಯಗಳೂ ಸಿದ್ಧವಾಗುತಿದ್ದುವು. ಅವಕ್ಕೆ ಹೊನ್ನುಗಳೆಂದು ಹೆಸರಿದ್ದಿತು. ವಿಜಯನಗರದ ಅರಸರ ಕಾಲದಲ್ಲಿ ಭರತಖಂಡದಲ್ಲಿ ಬಂಗಾರದ ನಾಣ್ಯಗಳನ್ನು ಸಿದ್ಧಪಡಿಸುವ ಟಂಕಸಾಲೆಯೆಂದರೆ ಇದೊಂದೆ.

ಓಲಗಮನೆಯು ನೆಲಗಟ್ಟಿನಿಂದ ಉತ್ತರಕ್ಕೆ ಸಾಗಿಹೋದರೆ ಹಜಾರರಾಮನ ಗುಡಿಯು ಹತ್ತುವುದು. ಈ ದೇವಾಲಯದ ಹೊರ ಗೋಡೆಯಮೇಲೆ ಒಳಗೋಡೆಯಮೇಲೆ ಎಲ್ಲೆಲ್ಲಿಯೂ ಮೂರ್ತಿ ಗಳನ್ನು ಕೆತ್ತಿರುವರು. ಹೊರಗೋಡೆಯ ಮೇಲೆ ಮಾನವಮಿಬ್ಬದ ಕಟ್ಟೆಯಲ್ಲಿ ಕೆತ್ತಿದಂತೆ ಆನೆಕುದುರೆ, ನರ್ತಕಿಯರು ಮೊದಲಾದವರ ಮೂರ್ತಿಗಳನ್ನು ಸಾಲುಸಾಲಾಗಿ ಕೆತ್ತಿರುವರು. ಒಳಗೋಡೆಯ ಮೇಲೆ ರಾಮಾಯಣ ಭಾರತಗಳಲ್ಲಿಯ ಪ್ರಸಂಗಗಳು ಕೆತ್ತಲ್ಪಟ್ಟಿವೆ. ಮುಖ್ಯ ವಾಗಿ ರಾಮಾಯಣವು ಇಲ್ಲಿ ಪೂರ್ಣವಾಗಿ ಚಿತ್ರಿಸಲ್ಪಟ್ಟಿದೆಯೆಂದು ಹೇಳಬಹುದು. ಈ ದೇವಾಲಯಕ್ಕೆ ಸೇರಿದಂತೆಯೇ ಅಮ್ಮನಗುಡಿ ಯಿದೆ. ಎಂದರೆ ಇದು ರಾಮದೇವರ ಗುಡಿಯಾದರೆ ಅದು ಸೀತಮ್ಮ ನವರ ಗುಡಿ. ಅಮ್ಮನ ಗುಡಿಯು ಆಕೃತಿಯಲ್ಲಿ ಚಿಕ್ಕದು ಅದ ರಲ್ಲಿಯ ಕೆತ್ತಿಗೆಯ ಕೆಲಸವು ವಿಶೇಷ ಮನೋಹರವಿದೆ. ಈ ಹಜಾರ ರಾಮನ ಗುಡಿಯು ಸಾರ್ವಜನಿಕ ದೇವಾಲಯವಲ್ಲ. ಅರಸನ ಸ್ವತಂತ್ರ ದೇವಪೂಜಾಗೃಹವಾಗಿದ್ದಿತು. ಅರಮನೆಯಲ್ಲಿಯೇ ಒಂದು ಸ್ವತಂತ್ರ ದೇವಾಲಯವಿರುವುದನ್ನು ನಾವು ಈಗಲೂ ಸಂಸ್ಥಾನಿಕರ ಅರಮನೆ ಗಳಲ್ಲಿ ನೋಡುವುದಿಲ್ಲವೆ? ಅಂತಹ ದೇವಾಲಯವಿದು.

ಹಜಾರರಾಮನ ಗುಡಿಯಿಂದ ಮುಂದಕ್ಕೆ ಹೋದರೆ ಉತ್ತರ ದಿಕ್ಕಿನಲ್ಲಿ ಅಂತಃಪುರದ ಸುತ್ತುಗೋಡೆಯು ಕಾಣುವುದು. ಅದರೊಳಗೆ ಹೊಕ್ಕರೆ ಸುಸ್ಥಿತಿಯಲ್ಲಿರುವ ಮೂರು ಕಟ್ಟಡಗಳು ಮಾತ್ರ ದೃಷ್ಟಿಗೆ ಬೀಳುವವು. ಸುತ್ತುಗೋಡೆಯ ಉತ್ತರ ದಕ್ಷಿಣ ದಿಕ್ಕುಗಳಲ್ಲಿರುವ ನಗಾರಖಾನೆಗಳೆರಡು. ಕಮಲಮಹಾಲೊಂದು ಈ ಕಟ್ಟಡಗಳ ಗೋಡೆಗಳು ಗಚ್ಚಿನ ಗಿಲಾಯಿ ಮಾಡಿದಂತಹವಿರುತ್ತವೆ. ಹಿಂದೂಮುಸಲ್ಮಾನೀ ಶಿಲ್ಪಕಲೆಗಳನ್ನು ಯೋಗ್ಯರೀತಿಯಿಂದ ಬೆರಿ

ಸಿದರೆ ಯಾವ ಹೊಸಬಗೆಯ ಸೌಂದರ್ಯ ಬರುತ್ತದೆಂಬುವನ್ನು ತಿಳಿಯ ಬೇಕಾದರೆ ಈ ಕಮಲಮಹಲನ್ನು ನೋಡಬೇಕು. ರಾಣಿಯರಿರುವ ಅರಮನೆಗಂತೂ ಓಲಗದಮನೆ ವಿಜಯಗೃಹಗಳ ಸ್ಥಿತಿಯೇ ಬಂದು ಬಿಟ್ಟಿದೆ. ಕಟ್ಟಡದ ನೆಲಗಟ್ಟಿನಲ್ಲಿ ಅಲ್ಲಲ್ಲಿ ನೀರುಗಾವಲಿಗಳು ಇನ್ನೂ ದೃಷ್ಟಿಗೆ ಬೀಳುತ್ತವೆ. ಅಂತಃಪುರದ ಹೊರಗಡೆಯ ದಕ್ಷಿಣದಿಕ್ಕಿನಲ್ಲಿ ರಂಗನ ಚಿಕ್ಕದೊಂದು ಗುಡಿಯಿದೆ. ಪಶ್ಚಿಮ ದಿಕ್ಕಿನಲ್ಲಿ ಆನೆಗಳ ಲಾಯವೂ ಉತ್ತರದಲ್ಲಿ ಕಾವಲುಗಾರರಿರುವ ಕೊಟಡಿಗಳೂ ಇರುತ್ತವೆ.

ಹಜಾರರಾಮನ ಗುಡಿಯಿಂದ ಪಂಪಾಪತಿಯ ಗುಡಿಗೆಹೋಗುವ ದಾರಿಯಲ್ಲಿ ದಂಡನಾಯಕನ ಅರಮನೆಯ ಮಹಾದ್ವಾರವು ಹತ್ತುತ್ತದೆ. ಅದನ್ನು ಒಳಹೊಕ್ಕು ನೋಡಿದರೆ ಒಂದು ಮಸೀದೆ. ಹಂಪೆಯಲ್ಲಿ ಕಣ್ಣಿಗೆ ಬೀಳುವ ಮಸೀದೆಯೆಂದರೆ ಇದೊಂದೆ. ದೇವರಾಯನು ಮುಸಲ್ಮಾನ ಸೈನಿಕರ ಪ್ರಾರ್ಥನೆಗಾಗಿ ಕಟ್ಟಿಸಿಕೊಟ್ಟ ಮಸೀದೆಯಾಗಿರಬೇಕಿದು. ಈ ಆವಾರದಲ್ಲಿಯೂ ವಾಯವ್ಯ ದಿಕ್ಕಿನಲ್ಲೊಂದು ನಗಾರಖಾನೆಯಿದೆ. ಅರಮನೆಗಾಗಲಿ ದೇವಾಲಯಗಳಿಗಾಗಲಿ ಇಂತಹ ನಗಾರಖಾನೆಗಳಿರುವುದು ನಮ್ಮ ಹಿಂದೂ ದೇಶದಲ್ಲಿ ಮೊದಲಿನಿಂದ ನಡೆದು ಬಂದ ಪದ್ಧತಿಯೆಂದು ತೋರುತ್ತದೆ. ಈ ನಗಾರಖಾನೆಗಳ ಉಪಯೋಗವು ಸಂಜೆ ಮುಂಜಾವುಗಳಲ್ಲಿ ವಾದ್ಯಗಳನ್ನು ಬಾರಿಸುವುದಕ್ಕಾಗಿ ಆಗುವುದು.

ಇಲ್ಲಿಗೆ ಅರಮನೆಗೆ ಸಂಬಂಧಿಸಿದ ಏಳನೆಯ ಕೋಟೆಯೊಳಗಿನ ಭಾಗವು ಮುಗಿದಂತಾಯಿತು. ದಂಡನಾಯಕನ ಮನೆಯಿಂದ ಮುಂದೆ ಹೋದರೆ ನೆಲದೊಳಗಿಂದ ಅಗಿದು ತೆಗೆದ ಗುಡಿಯೊಂದು ಹತ್ತುವುದು. ಅದಕೀಗ ನೆಲದೊಳಗಿನ ಗುಡಿಯೆಂತಲೇ ಕರೆಯುವರು. ಗುಡಿಯಲ್ಲಿ

ಮೂರ್ತಿಯಿಲ್ಲ. ಇದು ಈಶ್ವರಲಿಂಗನ ಗುಡಿ. ಆದರೊಂದು ಶಿಲಾ ಲೇಖದಿಂದ ಈ ಗುಡಿಯು ಪ್ರಸನ್ನ ವಿರೂಪಾಕ್ಷನ ಗುಡಿಯೆಂದು ಕರೆಯಲ್ಪಡುತ್ತಿದ್ದಿತೆಂದು ತಿಳಿಯುತ್ತದೆ. ಗುಡಿಯಲ್ಲಿ ಈಶಾನ್ಯಮೂಲೆ ಯಲ್ಲಿ ನಾಗಕಲ್ಲುಗಳಿರುತ್ತವೆ. ಇವರಿಂದ ನಾಗಚವತಿಗೆ ನಾಗಪ್ಪನಿಗೆ ಹಾಲೆರೆಯುವುದಕ್ಕೆ ಹೆಣ್ಣುಮಕ್ಕಳು ಈ ಗುಡಿಗೆ ಬರುತ್ತಿದ್ದರೆಂದು ತೋರುತ್ತದೆ. ಈ ಗುಡಿಯಿಂದ ಮುಂದೆಹೋದರೆ ಎರಡು ಬಂಡೆಗಲ್ಲು ಗಳು ಒಂದಕ್ಕೊಂದು ಹೊಂದಿನಿಂತು ಮಾಡಿದ ಕಮಾನು. ಅದೂ ಒಂದು ಬೆರಗುಗೊಳಿಸುವಂತಹದೆ. ಸಾಮಾನ್ಯ ಮನುಷ್ಯನು ಕೈಗಲ್ಲು ಒಗೆದರೆ ಅವುಗಳ ತುದಿಗೆ ಹೋಗದಷ್ಟು ಎತ್ತರ. ಅಕ್ಕತಂಗಿಯರ ಕಲ್ಲೆಂದು ಹೆಸರು ಅದಕ್ಕೆ. ಹೀಗೆಯೆ ನಾವು ಮುಂದೆ ಹೋದರೆ ಪಂಪಾಪತಿಯ ದೇವಾಲಯಕ್ಕೆ ಹೋಗಬಹುದು. ಮುಖ್ಯನಗರದ ಕೋಟೆಯನ್ನು ಅಕ್ಕತಂಗಿಯರ ಕಲ್ಲಿನ ಹತ್ತರವೇ ದಾಟುವೆವು. ದಾರಿಗುಂಟ ಹೋಗುವಾಗ ಹಲವು ಚಿಕ್ಕದೊಡ್ಡ ಗುಡಿಗಳು ಹತ್ತು ವವು. ದಾರಿಯಲ್ಲಿ ಹತ್ತುವ ಮೊದಲ ಗುಡಿಯೆಂದರೆ ಉದ್ದಾನ ವೀರಭದ್ರನಗುಡಿ. ಇದು ದಾರಿಯ ಬಲಬದಿಗೆ ಇದೆ. ಗುಡಿಯಲ್ಲಿ ೧೦—೧೫ ಫೂಟು ಎತ್ತರವಾದ ವೀರಭದ್ರನ ಮೂರ್ತಿ. ಪೂಜೆ ಮಾಡಬೇಕಾದರೆ ನಿಚ್ಚಣಿಕೆ ಹಚ್ಚಬೇಕು. ಇಲ್ಲಿಯವರೆಗೆ ನೋಡಿದ ಗುಡಿಗಳಲ್ಲಿ ಮೂರ್ತಿಗಳಿರಲಿಲ್ಲ. ಒಳ್ಳೇ ಸುಸ್ಥಿತಿಯಲ್ಲಿದ್ದ ಮೂರ್ತಿ ಯನ್ನು ನೋಡುವುದು ಇದೇ ಮೊದಲು. ಗುಡಿಯಲ್ಲೀಗಲೂ ಪೂಜಾ ರ್ಚನೆಗಳು ನಡೆಯುತ್ತಿವೆ. ಪೂಜಾರಿಗಳು ಲಿಂಗವಂತರು. ಈ ಉದ್ದಾನ ವೀರಭದ್ರನ ಗುಡಿಯ ಎದುರಿನಲ್ಲಿ ದಾರಿಯ ಆಚೆಯ ಬದಿಗೆ ಅನೇಕ ಮಾಸತಿಗಲ್ಲುಗಳಿರುತ್ತವೆ. ಗಂಡನ ಮೃತದೇಹದೊಡನೆ ಚಿತೆಯನ್ನೇ ರಿದ ಮಾಸತಿಯರ ಸ್ಮರಣೆಗಾಗಿ ನೆಟ್ಟಕಲ್ಲುಗಳಿವು. ಕಲ್ಲುಗಳ ಕೆಳ

ಭಾಗದಲ್ಲಿ ಮೃತಪುರುಷನನ್ನೂ ಅವನೊಡನೆ ಸತಿಹೋದ ಸ್ತ್ರೀಯರನ್ನೂ ಕೆತ್ತಿರುವರು. ಮೇಲ್ಪದಿಯಲ್ಲಿ ಈಶ್ವರಲಿಂಗ, ನಂದಿ ಕೆತ್ತಲ್ಪಟ್ಟಿವೆ.

ಇಲ್ಲಿಂದ ತುಸು ದೂರದಲ್ಲಿಯೇ ತುಂಗಭದ್ರಾನದಿಯ ಕಾಲುವೆ ಹತ್ತುತ್ತದೆ. ಅದನ್ನು ದಾಟಿದರೆ ಉಗ್ರನರಸಿಂಹನ ದೇವಾಲಯ. ವೀರಭದ್ರನು ತನ್ನ ಹೆಸರಿನಂತೆ ಹೇಗೆ ಉದ್ದಾನುದ್ದನಿರು ವನೊ ಹಾಗೆ ಈ ನರಸಿಂಹನೂ ಉಗ್ರನಾಗಿಯೆ ಇರುವನು. ೨೨ ಅಡಿ ಎತ್ತರವಾದ ಬಂಡೆಯಲ್ಲಿ ಕಡೆದ ಮೂರ್ತಿ, ಆ ಉಗ್ರವಾದ ಸಿಂಹಮುಖ, ಎಲ್ಲದರಲ್ಲಿಯೂ ಭವ್ಯವಾಗಿದೆ. ಅಂಕದಲ್ಲಿ ಮಹಾ ಲಕ್ಷ್ಮಿಯು ಸ್ಥಾನಾಪನ್ನಳಾಗಿದ್ದಾಳೆ. ಮೂರ್ತಿಯೆಲ್ಲವು ಅಚ್ಚಳಿಯದೆ ಇದ್ದರೆ ಅದೆಷ್ಟು ಭವ್ಯವಾಗಿ ಕಾಣುತಿದ್ದಿತೊ ತಿಳಿಯದು. ಕೈಕಾಲು ಗಳೂ ಒಡೆದುಹೋಗಿವೆ. ಮಹಾಲಕ್ಷ್ಮಿಯ ಗತಿಯಂತೂ ಕೇಳಲೇ ಬಾರದು. ನಡುವಿನ ಕೆಳಭಾಗವು ನಾರಸಿಂಹನ ತೊಡೆಯ ಮೇಲಿದ್ದರೆ ಧಡದ ಭಾಗವೆಲ್ಲ ಒಡೆದು ಅಲ್ಲಿಯೇ ಕೆಳಗೆ ಬಿದ್ದಿದೆ. ಅದೂ ಮೋಟುಗೈ. ಸವರಿದಂತಾದ ಮುಖ!

ಉಗ್ರನರಸಿಂಹನ ಗುಡಿಗೆ ಹೊಂದಿಯೇ ಚಿಕ್ಕದೊಂದು ಶಿವಾಲಯ. ಚಿಕ್ಕಗುಡಿ ಇದರಲ್ಲೇನಿರಬಹುದೆಂದು ಅಲಕ್ಷ್ಯಿಸುವಂತಿಲ್ಲ. ಒಳಗಿರುವ ಲಿಂಗವು ಬೇರೆಕಡೆಯಲ್ಲೆಲ್ಲಿಯೂ ದೃಷ್ಟಿಗೆ ಬೀಳದಂತಹದು. ೨೦ ಅಡಿ ಅಗಲವಾದ ಜಲಹರಿ. ಅದರ ಮೇಲೆ ೬--೭ ಅಡಿ ಎತ್ತರವಾದ ಶಿವಲಿಂಗ, ಕಾಲುವೆಯ ಶಾಖೆಯೊಂದು ಗುಡಿಯ ಒಳಹೊಕ್ಕು ಲಿಂಗವನ್ನು ಸುತ್ತುವರಿದು ಹೋಗಿರುವುದು. ನೀರಿನ ನಡುವೆ ನಿಂತುದ ರಿಂದ ಲಿಂಗಕ್ಕೆ ಒಳ್ಳೇ ಸೊಬಗುಬಂದಿದೆ. ಹೆಸರೇನೋ ಬಡವಿಯಲಿಂಗ! ಬಡವಿಯಲಿಂಗವೇ ಈ ಪರಿಯಿದ್ದ ಮೇಲೆ ಮತ್ತಾರಾದರೂ ಶ್ರೀಮಂ ತರು ಲಿಂಗವೊಂದು ಸ್ಥಾಪನೆ ಮಾಡಿದ್ದರೆ ಎಂತಹದಿರುತ್ತಿದ್ದಿತೊ ?

ಮುಂದಕ್ಕೆ ಹೋದರೆ ಕೃಷ್ಣನ ಗುಡಿ. ಕೃಷ್ಣರಾಯನು ಉತ್ಕಲ ಪ್ರಾಂತದ ಮೇಲೆ ವಿಜಯಯಾತ್ರೆ ಹೋಗಿ ತಿರುಗಿಬರುವಾಗ ಉದಯ ಗಿರಿಯ ಮೇಲಿರುವ ಶ್ರೀಕೃಷ್ಣನ ಮೂರ್ತಿಯನ್ನು ತಂದು ಇಲ್ಲಿ ಸ್ಥಾಪಿಸಿ ಗುಡಿ ಕಟ್ಟಿಸಿದನಂತೆ. ಈ ಗುಡಿಯ ನೆರೆಯಲ್ಲಿಯೆ ವಿಷ್ಣುವಿನ ಚಿಕ್ಕದೊಂದು ದೇವಾಲಯವಿದೆ. ಈ ಗುಡಿಗಳ ಹತ್ತಿರವೆ ನಾವೀಗ ಹೊರಟಹಾದಿಯು ಹೊಸಪೇಟೆಯಿಂದ ಹಂಪೆಗೆ ಹೋಗುವ ದಾರಿಯನ್ನು ಕೂಡುವುದು. ಆ ದಾರಿಗುಂಟ ನಾವು ವಿರೂಪಾಕ್ಷನ ತೇರು ಬೀದಿಯನ್ನು ಸೇರಿ ಅವನ ದೇವಾಲಯವನ್ನು ಪ್ರವೇಶಿಸಬಹುದು. ಆದರೆ ಇಷ್ಟೆಲ್ಲ ಮಾಡುವುದೂ ಆ ದಾರಿಯ ಬದಿಯಲ್ಲಿರುವ ವಿಘ್ನೇಶ್ವ ರರು ಬಿಟ್ಟಾಗಲ್ಲವೆ? ಅವರಲ್ಲೊಬ್ಬನಿಗೆ ಸಾಸಿವೆಕಾಳುಗಣಪ್ಪ ನೆಂದು ಹೆಸರು. ಇನ್ನೊಬ್ಬನಿಗೆ ಕಡಲೆಯಕಾಳುಗಣಪ್ಪನೆಂದು ಹೆಸರು. ಉದ್ದಾನವೀರಭದ್ರ ಉಗ್ರನರಸಿಂಹರಂತೆ ಇವರೂ ಅನ್ವರ್ಥ ನಾಮದವರಾಗಿರುವರೆಂದು ತಿಳಿದುಕೊಳ್ಳದಿರಿ! ಇವರ ಅಳತೆಯೆ ಬೇರೆ. ಕಲಿಯುಗದ ಹತ್ತರಷ್ಟು ಹೆಚ್ಚು ಎತ್ತರದ ಮನುಷ್ಯರು ದ್ವಾಪರದಲ್ಲಿದ್ದರಂತೆ. ಇದೇ ಪ್ರಮಾಣದಿಂದ ತ್ರೇತಾಯುಗಕೃತ ಯುಗಗಳ ಮನುಷ್ಯರ ಅಳತೆಯು ಹೆಚ್ಚುತ್ತ ಹೋಗುವುದಂತೆ. ಉಳಿದ ಪದಾರ್ಥಗಳ ಪ್ರಮಾಣವೂ ಆಯಾ ಯುಗದಲ್ಲಿ ಇದಕ್ಕನು ಸರಿಸಿ ಹೆಚ್ಚಿದ್ದರೂ, ಕೃತಯುಗದ ಸಾಸಿವೆಗಳೂ ಕಡಲೆಯ ಕಾಳು ಗಳೂ ಈ ಮೂರ್ತಿಗಳಷ್ಟು ದೊಡ್ಡವಾಗಿರಲಾರವು. ಅಷ್ಟೇಕೆ ನಾಲ್ಕು ನಾಲ್ಕರಂತೆ ಮತ್ತೆ ನಾಲ್ವತ್ತು ಯುಗಗಳಾದರೂ ಆ ಪ್ರಮಾಣ ದಿಂದ ಅಳತೆ ಬೆಳಿಸಿದರೂ ಸಾಸಿವೆಕಾಳುಕಡಲೆಕಾಳುಗಳ ಪ್ರಮಾ ಣವು ಇಷ್ಟಕ್ಕೆ ಬರುವುದೊ ಇಲ್ಲವೊ ಸಂದೇಹ. ಸಾಸಿವೆಕಾಳುಕಡ ಲೆಯಕಾಳು ಎಂದು ಇಷ್ಟು ಚಿಕ್ಕಪುಟ್ಟ ಮೂರ್ತಿಗಳನ್ನು ಮಾಡಿ

ದವರು ಹಲಸಿನಕಾಯಿ ಕುಂಬಳಕಾಯಿ ಎಂದು ಹೆಸರಿಟ್ಟು ಮೂರ್ತಿಗಳನ್ನು ಮಾಡಿದ್ದರೆ ಎಂತಹವುಗಳನ್ನು ಮಾಡುತ್ತಿದ್ದರೊ ದೇವರೇ ಬಲ್ಲ !

ಇದೀಗ ಬಂದುದು ಹೇಮಕೂಟದ ಉತ್ತರದ ಪ್ರದೇಶ. ಇಲ್ಲಿಂದ ಬೆಟ್ಟವನ್ನಿಳಿಯುವುದಕ್ಕೆ ಆರಂಭವಾಗುತ್ತದೆ. ಮಗ್ಗುಲಲ್ಲಿಯೇ ಪಂಪಾಪತಿಯ ಗುಡಿ ಕಾಣುವುದರಿಂದ ತಿರುಗಿ ದೊಡ್ಡ ದಾರಿಯನ್ನು ಕೂಡಿ ಹೋಗಬೇಕೆಂಬ ಇಚ್ಛೆಯು ಬರುವುದು ಶಕ್ಯವೆ ಇಲ್ಲ. ಬೇಗನೆ ಪಂಪಾಪತಿಯ ದರ್ಶನ ತೆಗೆದುಕೊಳ್ಳಬೇಕೆಂದು ಅಲ್ಲಿಯೇ ಬೆಟ್ಟದ ಮೆಟ್ಟಲುಗಳನ್ನಿಳಿಯುವವರೇ ಹೆಚ್ಚು ಜನ. ಹಾಗೆ ಮೆಟ್ಟಲಿಳಿದು ಹೋದರೆ ಕೆಲವು ಜೈನರ ಬಸ್ತಿಗಳೂ ದೃಷ್ಟಿಗೆ ಬೀಳುವವು. ಇವುಗಳ ಮೇಲಿಂದ ಈ ಪ್ರದೇಶದಲ್ಲಿ ವಿಜಯನಗರ ಸ್ಥಾಪನೆಯಾಗುವ ಪೂರ್ವದಲ್ಲಿ ಜೈನರು ವಾಸವಾಗಿದ್ದರೆಂದೂಹಿಸಬಹುದಾಗಿದೆ. ಇರಲಿ. ಈ ಬಸ್ತಿಗಳನ್ನು ದಾಟಿದರೆ ಮನಸಿಗೆ ಆಹ್ಲಾದವನ್ನುಂಟು ಮಾಡುವ ಪಂಪಾವಿರೂಪಾಕ್ಷನ ದೇವಾಲಯದ ಮಹಾದ್ವಾರವು ಹತ್ತುವುದು. ದೇವಾಲಯದ ಪ್ರವೇಶ ಮಾಡುವುದೊಂದೇ ತಡ. ಇಲ್ಲಿಯವರೆಗೆ ಬರುವುದರಿಂದಾದ ದಾರಿಯ ದಣುವು ಎಲ್ಲಿಯೊ ಅಡಗಿ ಹೋಗುವುದು.

( ೪ )

ವಿರೂಪಾಕ್ಷನ ಗುಡಿಯು ಪೂರ್ವಾಭಿಮುಖವಾಗಿದೆ. ದೇವಾಲಯಕ್ಕೆ ಪೂರ್ವದಿಕ್ಕಿನಲ್ಲೊಂದು ಉತ್ತರ ದಿಕ್ಕಿನಲ್ಲೊಂದು ಹೀಗೆ ಎರಡು ಮಹಾದ್ವಾರಗಳಿರುತ್ತವೆ. ಪೂರ್ವದಿಕ್ಕಿನ ಮಹಾದ್ವಾರವೇ ಮುಖ್ಯವಾದುದು. ವಿರೂಪಾಕ್ಷನು ವಿಜಯಗರದರಸರ ಕುಲದೇವನು. ವಿಜಯನಗರ ಸಾಮ್ರಾಜ್ಯದ ಸ್ಥಾಪನಾದ ಹರಿ

ಹರನು ವಿದ್ಯಾರಣ್ಯರ ಹೇಳಿಕೆಯಂತೆ ಗುಡಿಯನ್ನು ಕಟ್ಟಿಸಿದನಂತೆ. ಇಷ್ಟೆಂದುದಕ್ಕೆ ಅವನೇ ಗುಡಿ ಕಟ್ಟಿಸಿ ಮೂರ್ತಿ ಸ್ಥಾಪಿಸಿದನೆಂಬ ಅರ್ಥವಲ್ಲ. ದೇವಾಲಯವು ವಿಜಯನಗರ ಸ್ಥಾಪನೆಗೆ ಮೊದಲಿನಿಂದಲೂ ಇರುವಂತಹದು. ಹರಿಹರನು ಗುಡಿಯ ಜೀರ್ಣೋದ್ಧಾರಮಾಡಿದನೆಂದಿಷ್ಟೆ ಅರ್ಥ. ದೇವಾಲಯದ ರಂಗಮಂಡಪವನ್ನೂ ಮಹಾದ್ವಾರಗಳ ಮೇಲಿರುವ ಗೋಪುರಗಳನ್ನೂ ಕೃಷ್ಣದೇವರಾಯನು ಕಟ್ಟಿಸಿದನು. ಪೂರ್ವದ ಮಹಾದ್ವಾರದ ಮೇಲಿನ ಗೋಪುರಕ್ಕೆ ೧೧ ಅಂತಸ್ತು. ಗೋಪುರದ ಬಗ್ಗೆ ಅಲ್ಲಿಯ ಪೂಜಾರಿಗಳ ಹೇಳಿಕೆಯೇ ಬೇರೆ. ಬಿಷ್ಟಪ್ಪಯ್ಯ ಎಂಬ ಸಾಧುಗಳಿದ್ದರಂತೆ. ನೆರೆಯ ಪರ್ವತಗಳ ಶಿಖರಕ್ಕೆ ಸಮಾನ ಎತ್ತರವಾಗಿ ಮಹಾದ್ವಾರದ ಗೋಪುರವನ್ನು ಕಟ್ಟಿಸಬೇಕೆಂದು ಬಯಸಿ ಬಹು ಪ್ರಯತ್ನ ಮಾಡಿದರಂತೆ. ಏನುಮಾಡಿದರೂ ಅದು ಸಾಧ್ಯವಾಗದೆ ಹೋಗಲು ಬಿಷ್ಟಪ್ಪಯ್ಯನವರ ಪತ್ನಿಯು ತಮ್ಮ ದೇಹವನ್ನಾಶ್ರಯವಾಗಿ ಕೊಡಲು ಗೋಪುರವು ಪೂರ್ಣವಾಯಿತಂತೆ! ಈ ಗೋಪುರದ ಮಗ್ಗುಲಲ್ಲಿ ಒಂದು ಗುಡಿಯಿದೆ. ಅದಕ್ಕೆ ಅಮ್ಮನಗುಡಿಯೆಂದು ಕರೆಯುವರು. ಅದು ಬಿಷ್ಟಪ್ಪಯ್ಯನವರ ಪತ್ನಿಯವರ ಸ್ಮಾರಕವಾಗಿ ಕಟ್ಟಿಸಿದ ಗುಡಿಯೆಂದು ಹೇಳುವರು. ಕೃಷ್ಣರಾಯನ ಹೇಳಿಕೆಯಂತೆ ಬಿಷ್ಟಪ್ಪಯ್ಯನವರು ಕಟ್ಟಿಸಿದ್ದರೂ ಕಟ್ಟಿಸಿರಬಹುದು. ಆದರೆ ಇದಕ್ಕೆ ಆಖ್ಯಾಯಿಕೆಯಲ್ಲದೆ ಮತ್ತಾವ ಆಧಾರವೂ ಇರುವುದಿಲ್ಲ. ಉಳಿದ ದೇವಾಲಯಗಳಿಗೆ ಅಮ್ಮನ ಗುಡಿಯಿರುವಂತೆ ವಿರೂಪಾಕ್ಷನ ಗುಡಿಗೂ ಇದ್ದುದಾಗಿರಬೇಕು.

ಪೂರ್ವದ ಮಹಾದ್ವಾರವನ್ನು ಪ್ರವೇಶಿಸಿದರೆ ಒಳಗಡೆ ವಿಸ್ತಾರವಾದ ಎರಡು ಪ್ರಾಕಾರಗಳಿರುತ್ತವೆ. ಮೇಷಸಂಕ್ರಮಣದಲ್ಲಿ ಈ ಎರಡೂ ಪ್ರಾಕಾರಗಳೊಳಗಿಂದ ಹಾಯ್ದು ಸೂರ್ಯನ ಕಿರಣಗಳು ಈಶ್ವರಲಿಂಗದ

ಮೇಲೆ ಬೀಳುತ್ತವಂತೆ. ಮೊದಲನೆಯ ಪ್ರಾಕಾರದಲ್ಲಿ ಮಧ್ಯದಲ್ಲಿ ತುಂಗಭದ್ರೆಯ ಕಾಲುವೆಹರಿದಿದೆ. ಆದರಿಂದಲೂ ಗುಡಿಗೆ ಒಂದು ತರದ ಸೌಂದರ್ಯ. ಈ ಪ್ರಾಕಾರದಲ್ಲಿ ಬಲಭಾಗದಲ್ಲಿ ಒಂದು ಈಶ್ವರ ಲಿಂಗನ ಗುಡಿ. ಎಡಭಾಗದಲ್ಲಿ ವಿಶಾಲವಾದ ಪೌಳಿ. ಈ ಪ್ರಾಕಾರ ವನ್ನು ದಾಟಿ ಒಳಗೆ ಹೋಗುವುದಾದರೂ ಮೊದಲನೆಯ ಮಹಾದ್ವಾರದ ರಚನೆಯಂತಿರುವ ಆದರೆ ಅದಕ್ಕೂ ಚಿಕ್ಕದಾದ ಪ್ರವೇಶದ್ವಾರ ದೊಳಗಿಂದ ಹೋಗಬೇಕು. ಹಾಗೆ ಹೋದರೆ ಎರಡನೆಯ ಪ್ರಾಕಾರದ ಮಧ್ಯದಲ್ಲಿ ಶ್ರೀವಿರೂಪಾಕ್ಷನ ದೇವಾಲಯ. ಎರಡೂ ಬದಿಯಲ್ಲಿ ಧರ್ಮ ಶಾಲೆಗಳಿವೆ. ಆ ಧರ್ಮಶಾಲೆಗಳಲ್ಲಿ ೪-೫ ಸಾವಿರ ಜನ ಸಹಜ ಹಿಡಿಯಬಹುದು.

ಇಲ್ಲಿಯ ವರೆಗೆ ಬರುವಾಗ ನೋಡಿದ ಗುಡಿಗಳ ಸ್ಥಿತಿಯೇ ಬೇರೆಯಾಗಿದ್ದಿತು. ಕೆಲವುಗಳಲ್ಲಿ ದೇವರ ಮೂರ್ತಿಗಳೇ ಇರಲಿಲ್ಲ. ಮೂರ್ತಿಗಳಿದ್ದುವುಗಳಲ್ಲಿಯೂ ಅವಿದ್ದ ಸ್ಥಿತಿಯೇ ಬೇರೆಯಾಗಿದ್ದಿತು. ಮುಖದಮೇಲೆ ಮೂಗಿರಲಿಲ್ಲ. ಒಂದು ಕೈ ನೆಟ್ಟಗಿದ್ದರೆ ಇನ್ನೊಂದು ಕೈಯಿರಲಿಲ್ಲ. ಮೂರ್ತಿಗಳಮೇಲೆ ಎಲ್ಲೆಲ್ಲಿಯೂ ದೊಣ್ಣೆಯ ಹೊಡೆತ ಗಳು ಕಂಡುಬರುತಿದ್ದುವು. ಅದೆಲ್ಲವನ್ನು ನೋಡಿ ಅಯ್ಯೋ ಹಾಳು ಮುಸಲ್ಮಾನರು ಮೂರ್ತಿಗಳನೆಲ್ಲ ಒಡೆದು ಬಿಟ್ಟಿರುವರು! ಎಂದು ಸಹಜವಾದ ಉದ್ಗಾರವು ಹೊರಡುತಿತ್ತು. ಬೇರೆರೀತಿಯಿಂದ ನಾಶ ವಾಗಿರಬಹುದಾದ ಕೆಲವು ಮೂರ್ತಿಗಳೂ ಮುಸಲ್ಮಾನರ ಹೊಡೆತದಲ್ಲಿ ಸಿಕ್ಕ ಮೂರ್ತಿಗಳ ಸಂಗಡಲೇ ಗಣಿಸಲ್ಪಡುತ್ತಿದ್ದುವು. ಸ್ವಾಭಾ ವಿಕವೇ ಇದೆ; ಚಿಕ್ಕದು ದೊಡ್ಡದರಲ್ಲಿಯೇ ಅಡಗಿ ಹೋಗು ವುದು! ಅದೇನೇ ಇರಲಿ. ಶ್ರೀವಿರೂಪಾಕ್ಷಲಿಂಗವು ಮಾತ್ರ ಯಾರ ಪೆಟ್ಟಿಗೂ ಒಳಗಾಗಿಲ್ಲ. ಇದರಬಗ್ಗೆ ಅಲ್ಲಿಯ ಪೂಜಾರಿಗಳು ಅನೇಕ

ಪ್ರಕಾರದ ಕಟ್ಟು ಕಥೆಗಳನ್ನು ಹೇಳುತ್ತಾರೆ. "ಮುಸಲ್ಮಾನ ದಂಡಾಳುಗಳು ವಿಜಯನಗರವನ್ನು ಹಾಳುಮಾಡುತ್ತ ದೇವಾಲಯಗಳನ್ನು ಹೊಕ್ಕು ಕೈಗೆ ಸಿಕ್ಕ ಮೂರ್ತಿಗಳನ್ನು ಒಡೆಯುತ್ತ ಶ್ರೀವಿರೂಪಾಕ್ಷನ ಲಿಂಗವನ್ನು ಒಡೆದು ಹಾಕಬೇಕೆಂದು ಗುಡಿಯನ್ನು ಹೊಕ್ಕರಂತೆ. ಆದಾಗ ಗುಡಿಯಲ್ಲಿ ಅವರಿಗೊಂದು ಅಕರಾಳವಿಕರಾಳ ಆಕೃತಿ ಕಂಡುಬಂದಿತಂತೆ. ಅದನ್ನು ನೋಡಿ ಅವರ ಕಣ್ಣುಗಳೇ ಮುಚ್ಚಿದವಂತೆ. ಆಗವರು ಅಂಜಿ ದಿಕ್ಕೆಟ್ಟು ಓಡಿಹೋದರಂತೆ!" ಈ ಮಾತು ಹೇಗಿದ್ದರೂ ಸಾಮ್ರಾಜ್ಯದ ಕುಲದೇವತೆಯಾಗಿದ್ದ ಶ್ರೀವಿರೂಪಾಕ್ಷನು ಮುಸಲ್ಮಾನರ ಕೈಯೊಳಗಿಂದ ಉಳಿದುದು ಅತ್ಯಾಶ್ಚರ್ಯಕಾರಕ ಸಂಗತಿ ಎಂಬುದು ಮಾತ್ರ ನಿಜವಾಗಿದೆ!

ವಿರೂಪಾಕ್ಷನ ದೇವಾಲಯದ ಹಿಂದು ಶ್ರೀಭುವನೇಶ್ವರಿಯ ಗುಡಿಯಿದೆ. ವಿದ್ಯಾರಣ್ಯರು ವಿದ್ಯಾಭ್ಯಾಸವನ್ನು ಮುಗಿಸಿಕೊಂಡು ಕಾಂಚೀಪುರದಿಂದ ಬಂದಮೇಲೆ ಅದಾವ ಶಕ್ತಿಯ ಪೂಜೆಮಾಡಿಕೊಂಡಿದ್ದರೋ, ಅದಾವ ಶಕ್ತಿಯ ಉಪಾಸನೆಯಿಂದ ಸಾಮ್ರಾಜ್ಯವನ್ನು ಕಟ್ಟಲು ಸಿದ್ಧರಾದರೋ ಅದಾವ ಶಕ್ತಿಯ ಸಾಮರ್ಥ್ಯದಿಂದದನ್ನು ಸಾಧಿಸಿಕೊಂಡರೋ ಆ ಶಕ್ತಿಯ-ಶ್ರೀಭುವನೇಶ್ವರಿಯ—ಮೂರ್ತಿಯು ಈಗಲು ಈ ಗುಡಿಯೊಳಗಿದೆ. ಈ ಗುಡಿಯ ಹಿಂಭಾಗದಲ್ಲಿಯೇ ಆ ಕರ್ಣಾಟಕ ಸಿಂಹಾಸನ ಸ್ಥಾಪನಾಚಾರ್ಯರ—ಶ್ರೀವಿದ್ಯಾರಣ್ಯರ—ಗುಡಿ. ಆ ಚಿಕ್ಕ ಗುಡಿಯಲ್ಲಿ ತಪಸ್ಸು ಮಾಡುವಂತೆ ಕೆತ್ತಿದ ಶ್ರೀವಿದ್ಯಾರಣ್ಯರ ಮೂರ್ತಿ. ಆ ಮೂರ್ತಿಯು ದೃಷ್ಟಿಗೆ ಬಿದ್ದಕೂಡಲೆ ಮನಸ್ಸಿನಲ್ಲಿ ಅದೆಂತಹ ವಿಚಾರಗಳುತ್ಪನ್ನವಾಗಬಹುದು; ಮನದ ಸ್ಥಿತಿಯು ಏನಾಗಬಹುದು! ಎಂಬುದನ್ನು ವಾಚಕರೇ ಊಹಿಸಿಕೊಳ್ಳಲಿ.

ಹಂಪೆಯ ವಿರೂಪಾಕ್ಷನ ಗುಡಿಗೆ ಹೊಂದಿಯೇ ತುಂಗಭದ್ರೆಯು

ಹರಿಯುತ್ತದೆ. ದೇವಾಲಯದ ಉತ್ತರದಿಕ್ಕಿನ ಬಾಗಿಲಿನಿಂದ ಹೊರ ಬಿದ್ದರೆ ಎಡಭಾಗದಲ್ಲಿ ಚಿಕ್ಕಪುಟ್ಟ ದೇವಾಲಯಗಳು. ಬಲಭಾಗದಲ್ಲಿ ಒಂದು ಸರಸ್ಸು. ನಾಲ್ಕಾರು ಹೆಜ್ಜೆ ಹೋದರೆ ಬಂಡೆಗಲ್ಲಿನ ಮೇಲಿಂದ ಉರುಳುತ್ತ ಸಾಗಿರುವ ಆ ತುಂಗಭದ್ರೆ. ಅದರ ಸೊಬಗನ್ನು ಬೇರೆ ಹೇಳಬೇಕೆ? ಅಲ್ಲಿಯ ಸೊಬಗನ್ನು ನೋಡಿ ನದಿಯ ನೀರನ್ನು ಕುಡಿದವರಿಗೆಯೆ ಗೊತ್ತು! ಆಗಲೇ ಹೊರಡುವುದು "ಗಂಗಾ ಸ್ನಾನ ತುಂಗಾಪಾನ!" ಎಂಬ ಉದ್ಗಾರ.

ಶ್ರೀವಿರೂಪಾಕ್ಷನ ಪೂಜಾರ್ಚನೆಯು ಈಗಲು ನಡೆಯುತ್ತದೆ. ಪೂಜಾರಿಗಳು ಬ್ರಾಹ್ಮಣರು. ಪ್ರತಿವರುಷ ಚೈತ್ರ ಶುದ್ಧ ಹುಣ್ಣಿವೆಗೆ ಜಾತ್ರೆಯಾಗುತ್ತದೆ. ತೇರು ಎಳೆಯುತ್ತದೆ. ಆ ಕಾಲಕ್ಕೆ ಎಳೆವ ಎರಡು ಕಟ್ಟಿಗೆಯ ತೇರುಗಳು ಗುಡಿಯ ಮುಂದೆ ಇರುತ್ತವೆ. ಆ ಕಾಲದಲ್ಲಿ ಸುಮಾರು ೨೦-೨೫ ಸಾವಿರ ಜನ ನೆರೆಯುವುದು. ಈ ಜಾತ್ರೆಯಿಂದಾದರೂ ಕನ್ನಡಿಗರಿಗೆ ಶ್ರೀವಿರೂಪಾಕ್ಷನ ನೆನಪಾಗುತ್ತದೆ. ಆದರೆ ಆ ಕಾಲದಲ್ಲಿಯೆ? ಕರ್ಣಾಟಕ ಸಾಮ್ರಾಜ್ಯದ ನೆನಪನ್ನು ಮಾಡಿಕೊಡುವಂತಹ ಕರ್ಣಾಟಕ ಇತಿಹಾಸ ಸಂಶೋಧನೆಗೆ ಸಾಹಾಯ ವಾಗುವಂತಹ ಏನಾದರೊಂದು ಕಾರ್ಯವನ್ನಲ್ಲಿ ಕೈಕೊಳ್ಳುವುದು ಕರ್ಣಾಟಕ ಮುಖಂಡರೆನಿಸಿಕೊಳ್ಳುವವರ ಕರ್ತವ್ಯವಾಗಿದೆ.

( ೫ )

ಶ್ರೀವಿರೂಪಾಕ್ಷನ ಗುಡಿಯ ಎದುರಿಗೆ ಸುಮಾರು ೧೨೦ ಅಡಿ ಅಗಲವಾದ ತೇರುಬೀದಿಯಿದೆ. ಅದರ ಎರಡೂ ಬದಿಗಳಲ್ಲಿ ದೊಡ್ಡ ದೊಡ್ಡ ಅಂಗಡಿಗಳೂ ಅರಮನೆಗಳೂ ಇದ್ದುವು. ಈ ಬೀದಿಯಂಗಡಿ ಗಳಲ್ಲಿ ಮುತ್ತುರತ್ನವಜ್ರವೈಡೂರ್ಯಗಳ ವ್ಯಾಪಾರವು ಬಹುವಾಗಿ ನಡೆ ಯುತಿತ್ತಂತೆ. ಈ ಅಂಗಡಿಗಳ ಹಾಳು ಕುರುಹುಗಳು ಅಲ್ಲಲ್ಲಿ

ದೃಷ್ಟಿಗೆ ಬೀಳುವುವು. ತೇರು ಬೀದಿಯು ಪೂರ್ವದಿಕ್ಕಿನಲ್ಲಿ ಒಂದೇ ಕಲ್ಲಿನಲ್ಲಿ ಕಡೆದ ಬಸವನಮೂರ್ತಿ. ಆ ಮೂರ್ತಿಯನ್ನು ನೋಡಿ ಕೊಂಡು ನದಿಯ ದಂಡೆಗುಂಟ ಹಾಗೆಯೆ ಮುಂದೆ ಹೋದರೆ ಲಕ್ಷ್ಮೀನಾರಾಯಣನಗುಡಿ, ಕೋದಂಡರಾಮನಗುಡಿ. ಲಕ್ಷ್ಮೀನಾರಾ ಯಣನ ಗುಡಿಯು ಅಷ್ಟೇನು ದೊಡ್ಡದಲ್ಲ. ಹೊರಗಡೆ ಅದಾವ ಕೆತ್ತಿ ಗೆಯ ಕೆಲಸವೂ ಇಲ್ಲ. ಒಳಗಡೆ ಮೂರು ವಿಗ್ರಹಗಳಿವೆ. ನಡುವೆ ಶ್ರೀಮನ್ನಾರಾಯಣನ ವಿಗ್ರಹ. ಪಾರ್ಶ್ವಗಳಲ್ಲಿ ಶ್ರೀದೇವಿಭೂದೇವಿಯರ ವಿಗ್ರಹಗಳು. ಮೂರ್ತಿಗಳು ಒಳ್ಳೇ ಸುಂದರವಾಗಿವೆ. ಆದರೆ ಪಾದ ಭಾಗವಲ್ಲದೆ ಉಳಿದುದೆಲ್ಲ ನಾಶವಾಗಿ ಹೋಗಿದೆ. ಮೂರ್ತಿಯ ಮೇಲ್ಭಾಗ ದಲ್ಲಿರುವ ಫಣಿರಾಜನ ಕಂಠವೂ ಕತ್ತರಿಸಿ ಹೋಗಿದೆ. ಕೋದಂಡ ರಾಮನಗುಡಿಯಲ್ಲಿ ಧನುರ್ಧಾರಿಯಾದ ರಾಮನ ಮೂರ್ತಿ; ಅವನ ಪಾರ್ಶ್ವಗಳಲ್ಲಿ ಸೀತಾಲಕ್ಷ್ಮಣರ ಮೂರ್ತಿಗಳಿವೆ. ರಾಮದೂತನಾದ ಹನುಮಂತನು ನೆರೆಯಲ್ಲಿ ನಿಂತಿರುವನು. ಸಾಮಾನ್ಯ ಮನುಷ್ಯರಷ್ಟು ಎತ್ತರವಾದ ಮೂರ್ತಿಗಳಿವು. ಗುಡಿಯಲ್ಲಿ ಪೂಜಾರ್ಚನೆಗಳು ನಡೆಯು ತ್ತಿವೆ. ಈ ಕೋದಂಡರಾಮನ ಎದುರಿಗೆಯೆ ತುಂಗಭದ್ರೆಯು ವಿಶಾಲ ವಾದ ತಿರುಗಣಿ ಮಡುವಿದೆ. ಅದಕ್ಕೆ ಚಕ್ರತೀರ್ಥವೆಂದು ಹೆಸರು. ನದಿಯ ಆಚೆ ಅಂಜನಾ ಬೆಟ್ಟವು ನಿಂತಿದೆ. ಆ ಬೆಟ್ಟದ ಓರೆಯಲ್ಲಿ ದಿನ್ನೆಯ ಮೇಲೆ ಕಲ್ಲುಮಂಟಪವೊಂದು ಕಾಣುವುದು. ಆ ದಿಬ್ಬಕ್ಕೆ ಸಂನ್ಯಾಸಿಯ ದಿಬ್ಬವೆಂದು ಎನ್ನುವರು. ನದಿಯ ದಂಡೆಗುಂಟ ಅಂತಹ ಮಂಟಪಗಳೆಷ್ಟೋ ಇವೆ. ಆದರೆ ಈ ಮಂಟಪದ ಮಹತ್ವವೇ ಬೇರೆ. ವಿದ್ಯಾರಣ್ಯರು ತಪಸ್ಸುಮಾಡಿದ ಸ್ಥಳವದು. ಅವರು ತಮ್ಮ ತಪಸ್ಸಿ ನಿಂದ ಶ್ರೀಭುವನೇಶ್ವರಿಯನ್ನು ಒಲಿಸಿಕೊಂಡ ಸ್ಥಳ. ಇದನ್ನು ಕೇಳಿ ಅಲ್ಲಿಗೆ ಹೋಗಬೇಕೆಂದು ಅನೇಕರಿಗೆ ಇಚ್ಛೆಯಾಗಬಹುದು. ಆದರೆ

ಅದು ಅಸಾಧ್ಯ. ಅಲ್ಲಿ ಹೋಗಬೇಕಾದರೆ ನದಿಯಾಚೆಯ ದಂಡೆ ಗುಂಟ ಅಂಜನಾ ಬೆಟ್ಟವನ್ನೇರಿ ಮತ್ತೆ ಅದನ್ನಿಳಿದು ಹೋಗಬೇಕು. ಅಷ್ಟು ಕಷ್ಟವನ್ನನುಭವಿಸಿ ಅಲ್ಲಿಗೆ ಹೋಗುವವರೇ ವಿರಳ.

ನಾವು ಕೋದಂಡರಾಮನ ಗುಡಿಯಿಂದ ಕಾಲುಹಾದಿಯಿಂದ ಸೂಳೆಯಬಾಜಾರಕ್ಕೆ ಬರಬೇಕು. ಸೂಳೆಯಬಾಜಾರವು ಹಂಪೆಯಲ್ಲಿಯ ಒಂದು ವಿಸ್ತಾರವಾದ ಬೀದಿ. ಇಲ್ಲಿ ನಗರದ ದೊಡ್ಡ ಸಂತೆ ಕೂಡುತಿದ್ದಂತೆ ತೋರುತ್ತದೆ ಬೀದಿಯ ವಾಯುವ್ಯ ದಿಕ್ಕಿನಲ್ಲಿ ಒಂದು ಕಟ್ಟಿ ತೆಗೆದ ಕೆರೆಯಿದೆ. ಅದು ಆ ಓಣಿಯಲ್ಲಿರುವ ವೇಶ್ಯೆಯರ ಜಲಕ್ರೀಡೆಯ ಸ್ಥಳ. ಈ ಸೂಳೆಯಬಾಜಾರದ ದಕ್ಷಿಣ ದಂಡೆಯಲ್ಲಿ ಅಚ್ಯುತರಾಯನ ಗುಡಿಯಿದೆ. ಇದೂ ಒಂದು ವಿಶಾಲವಾದ ದೇವಾಲಯ. ದೇವಾಲಯದ ಕಂಬಗಳ ಮೇಲೆಯೂ ಗೋಡೆಗಳ ಮೇಲೆಯೂ ಸುಂದರವಾದ ಕೆತ್ತಿಗೆಯ ಕೆಲಸ ಮಾಡಿರುವರು. ಈ ಗುಡಿಯನ್ನು ಅಚ್ಯುತದೇವರಾಯನು ೧೫೩೯ರಲ್ಲಿ ಕಟ್ಟಿಸಿದನೆಂದು ಶಿಲಾಲೇಖದಿಂದ ಗೊತ್ತಾಗುತ್ತದೆ.

ಅಚ್ಯುತರಾಯನ ಗುಡಿಯ ಹಿಂದೆ ಮಾತಂಗ ಪರ್ವತ ಆ ಪರ್ವತದಿಂದ ಅಚ್ಯುತರಾಯನ ಗುಡಿಗೂ ಸೂಳೆಯಬಾಜಾರಕ್ಕೂ ಒಳ್ಳೇ ಶೋಭೆಬಂದಿದೆ. ಪರ್ವತದಮೇಲೆ ಪರಶುರಾಮನ ಗುಡಿಯೂ ಬೇರೆ ಕೆಲವು ಚಿಕ್ಕಪುಟ್ಟ ದೇವಾಲಯಗಳೂ ಇರುತ್ತವೆ. ಪರ್ವತವನ್ನೇರಿ ನೋಡಿದರೆ ಬೆಟ್ಟದ ಕೊಳ್ಳದಲ್ಲಿ ಹರಿವ ತುಂಗಭದ್ರೆ, ಸುತ್ತಲಿರುವ ವಿಜಯನಗರದ ಹಾಳುದೃಶ್ಯ, ಎಲ್ಲವೂ ಒಮ್ಮೆಲೆ ದೃಷ್ಟಿಗೆ ಬೀಳುವವು ಇಲ್ಲಿಯ ಮುಂಜಾವು ಸಂಜೆಗಳ ನೋಟವಂತೂ ಒಳ್ಳೇ ರಮ್ಯವಾಗಿರುವುದು. ಆ ನೋಟಗಳನ್ನು ನೋಡಿ ಅದರ ಆನಂದವನ್ನನುಭವಿಸಿದ ಮಿ. ಲಾಂಘರ್ಸ್ಟರವರು (Longhurst) "ದಕ್ಷಿಣ

ಹಿಂದುಸ್ಥಾನದಲ್ಲಿ ಇಂತಹ ರಮ್ಯಸ್ಥಳವು ಬೇರೊಂದಿಲ್ಲ." ಎಂದು ಉದ್ಗಾರ ತೆಗೆದಿದ್ದಾರೆ.

ಮಾತಂಗಪರ್ವತದ ದಕ್ಷಿಣದಿಕ್ಕಿನಲ್ಲಿ ನೋಡತಕ್ಕಂಥ ಸ್ಥಳಗಳಾವುವೂ ಇರವುದಿಲ್ಲ. ಅದಕ್ಕಾಗಿ ಮತ್ತೆ ಆ ಪರ್ವತವನ್ನಿಳಿದು ಸೂಳೆಯಬಾಜಾರದೊಳಗಿಂದ ಹಾಯ್ದು ನೆಟ್ಟಗೆ ಉತ್ತರಕ್ಕೆ ಸಾಗಬೇಕು. ಅಲ್ಲಿ ನಾವು ವರಾಹದೇವರ ಗುಡಿಯನ್ನು ನೋಡಬಹುದು. ಭೂಮಿಯನ್ನು ಹೊತ್ತುಕೊಂಡು ಪಾತಾಳಕ್ಕೊಯ್ದ ಹಿರಣ್ಯಾಕ್ಷ ದೈತ್ಯನನ್ನು ಕೊಂದು ನಿಷ್ಕಂಟಕ ಮಾಡಿದ ವರಾಹಮೂರ್ತಿಯು ಗುಡಿಯಲ್ಲಿ ವಿರಾಜಮಾನವಾಗಿದೆ. ವಿಜಯನಗರದ ಸಮ್ರಾಜರು ತಮ್ಮ ಧ್ವಜಪತಾಕೆಗಳಲ್ಲಿಟ್ಟುಕೊಂಡ ಲಾಂಛನವು ಈ ವರಾಹ ಮೂರ್ತಿಯದು. ವರಾಹದೇವರ ಗುಡಿಯಿಂದ ವಿಟ್ಠಲಸ್ವಾಮಿಯ ಗುಡಿಗೆ ಹೋಗುವಾಗ ದಾರಿಯಲ್ಲಿ ಸಮೀಪದಲ್ಲಿಯೆ ಬಲಭಾಗದಲ್ಲಿ ಅನಂತಶಯನನ ಗುಡಿಯು ಹತ್ತುವುದು. ಹಾಗೆಯೆ ಮುಂದಕ್ಕೆ ಹೋದರೆ ಜೈನರ ಬಸ್ತಿ. ಈ ಬಸ್ತಿಯಲ್ಲಿ ಅಲ್ಲಲ್ಲಿ ವಿಷ್ಣು ಲಕ್ಷ್ಮಿ ಹನುಮಂತ ಗರುಡ ಮೊದಲಾದ ವೈಷ್ಣವ ದೇವತೆಗಳನ್ನು ಕೆತ್ತಿರುವರು. ಇದನ್ನು ನೋಡಿದವರಿಗೆ ಇದು ವೈಷ್ಣವರ ದೇವಾಲಯವೋ? ಎಂಬ ಶಂಕೆಯು ಉತ್ಪನ್ನವಾಗುತ್ತದೆ. ಆದರೆ ದ್ವಾರಪಾಲಕನಂತೆ ನಿಂತಿರುವ ವಿಷ್ಣುವಿನ ಮೂರ್ತಿಯನ್ನು ನೋಡಿದರೆ ಆ ಶಂಕೆಯು ಬಯಲಾಗುವುದು. ಆದಾವ ವೈಷ್ಣವರು ವಿಷ್ಣುವನ್ನು ದ್ವಾರಪಾಲಕರ ಸ್ಥಿತಿಯಲ್ಲಿ ನಿಲ್ಲಿಸುವರು! ಇರಲಿ. ಈ ಬಸ್ತಿಯಿಂದ ಎದುರಿಗೆ ನದಿಯ ಕಡೆಗೆ ಹೋಗುವ ಕಾಲುದಾರಿಯನ್ನು ಹಿಡಿದು ಹೋದರೆ ಸುಗ್ರೀವನ ಗವಿಯು ಹತ್ತುವುದು. ರಾವಣನು ಸೀತೆಯನ್ನು ಹೊತ್ತುಕೊಂಡು ಹೋಗುವಾಗ ಅವಳು ತನ್ನ ಮೈಮೇಲಿನ

ಆಭರಣಗಳನ್ನು ತೆಗೆದು ಮೂಟೆಕಟ್ಟಿ ಈ ಸ್ಥಳದಲ್ಲಿ ಒಗೆದಳಂತೆ. ಆ ಆಭರಣಗಳನ್ನು ನೋಡಿಯೆ ರಾಮನು ಹನುಮಂತನನ್ನು ಸೀತೆಯ ಶೋಧಾರ್ಥವಾಗಿ ಕಳಿಸಿದನಂತೆ. ಗವಿಯ ದಾರಿಯಲ್ಲಿ ಬಂಡೆಗಲ್ಲುಗಳ ಮೇಲೆ ಕೆಂಪು ಬಿಳಿ ಪಟ್ಟಿಯೊಂದು ಮೂಡಿದೆ; ಅದು ಆ ಬಂಡೆಗಳ ಪದರೊಂದು. ಆದರೆ ಅದಕ್ಕೆ ಈಗ 'ಸೀತೆಯಸೆರಗು' ಎಂದು ಕರೆಯುತ್ತಾರೆ. ರಾವಣನು ಎಳೆದೊಯ್ಯುವಾಗ ಕೆಳಗೆ ಬಿದ್ದು ಅಲೆದಾಡುತಿದ್ದ ಸೀತಮ್ಮನವರ ಸೆರಗಿನ ಕುರುಹು ಅದೆಂದು ಭಾವಿಕಜನರ ಕಲ್ಪನೆ. ಈ ಸುಗ್ರೀವನ ಗವಿಯ ನೆರೆಯಲ್ಲಿಯೇ ನದಿಯ ದಂಡೆಯ ಮೇಲೆ ವಿಶಾಲವಾದ ಎರಡು ಬಂಡೆಗಲ್ಲುಗಳ ಮೇಲ್ಭಾಗದಲ್ಲಿ ಅಸಂಖ್ಯವಾದ ಈಶ್ವರ ಲಿಂಗಗಳಿರುವವು. ಅವುಗಳಿಗೆ ಕೋಟಿಲಿಂಗಗಳೆಂದು ಹೆಸರು.

ಈ ಕೋಟಿಲಿಂಗಗಳಿಂದ ಹಾಗೆಯೆ ತುಸು ದೂರಹೋದರೆ ತುಂಗಭದ್ರೆಯನ್ನು ದಾಟಿ ಆಚೆಯ ದಂಡೆಗೆ ಹೋಗುವುದಕ್ಕಾಗಿ ಬಂಡೆಗಳಿಂದ ಮಾಡಿದ ಹಳೆಯ ಸೇತುವೆ ಹತ್ತುವುದು. ಅದನ್ನು ನಾವು ನೋಡಿಕೊಂಡು ಮರಳಿ ಕಾಲುದಾರಿಗುಂಟ ಮೊದಲಿನ ದಾರಿಗೆ ಬಂದರೆ "ತುಲಾಪುರುಷ ದಾನ" ಎಂಬ ಸ್ಥಳವು ಹತ್ತುವುದು. ಅಲ್ಲಿ ತೂಕ ಮಾಡುವುದಕ್ಕಾಗಿ ಕಂಬಗಳನ್ನು ನಿಲ್ಲಿಸಿ ತಕ್ಕಡಿಯನ್ನು ಇಳಿಬಿಡುವಂತೆ ಮೇಲೆ ಅಡ್ಡದೊಲೆ ಹಾಕಿರುವರು. ವಿಜಯನಗರದ ಸಮ್ರಾಜರು ಪರ್ವಕಾಲಗಳಲ್ಲಿ ಈ ಸ್ಥಳದಲ್ಲಿ ಕನಕ ಮುತ್ತುರತ್ನಗಳೊಂದಿಗೆ ತಮ್ಮ ತೂಕಮಾಡಿಸಿ ಅವನ್ನು ಬ್ರಾಹ್ಮಣರಲ್ಲಿ ಹಂಚಿಬಿಡುತ್ತಿದ್ದರಂತೆ. ವಿಜಯನಗರದ ಸಮ್ರಾಜೇಶ್ವರನಾದ ಕೃಷ್ಣರಾಯನೂ ಅವನ ತರುವಾಯ ಬಂದ ಅಚ್ಯುತರಾಯನೂ ಅನೇಕ ಸಾರೆ ತುಲಾಪುರುಷದಾನಗಳನ್ನು ಮಾಡಿದಂತೆ ತಿಳಿದು ಬರುತ್ತದೆ. ಈ ದಾನದ ಮೇಲಿಂದಲೇ ಆ ಸಮ್ರಾಜರ ವೈಭವವನ್ನು

ಸಹಜ ಪರಿಗಣಿಸಬಹುದು. ಈ ಕಾಲದಲ್ಲಿಯೊ ಇಂತಹ ದಾನ ಮಾಡುವ ಮಹಾರಾಜರು ದೊರೆವುದು ಎಲ್ಲಿಯೊ ಕ್ವಚಿತ್ತಾಗಿ. ತುಲಾಪುರುಷದಾನಸ್ತಂಭದ ನೆರೆಯಲ್ಲಿಯೆ ವಿಟ್ಠಲಸ್ವಾಮಿಯ ಗುಡಿಯ ಪ್ರವೇಶದ್ವಾರವಿದೆ. ಅದು ಕಟ್ಟುತ್ತ ಕಟ್ಟುತ್ತ ಅರ್ಧಕ್ಕೆಯೆ ಉಳಿದುಬಿಟ್ಟಿದೆ. ಅದರ ನೆರೆಯಲ್ಲಿ ಒಂದು ವಿಷ್ಣುವಿನ ದೇವಾಲಯ. ದೇವಾಲಯವು ಚಿಕ್ಕದಾದರೂ ಅದರೊಳಗಿನ ಕೆಲಸವು ನೋಡತಕ್ಕ ದಾಗಿದೆ. ಈ ಗುಡಿಯನ್ನು ಸದಾಶಿವರಾಯನು ೧೫೬೧--೬೨ ರಲ್ಲಿ ಕಟ್ಟಿಸಿದನೆಂದು ಅಲ್ಲಿಯ ಶಿಲಾಲೇಖದಿಂದ ತಿಳಿದುಬರುತ್ತದೆ.

( ೬ )

ಹಂಪೆಯೆಂದಾಕ್ಷಣ ಮುಂದೆ ನಿಲ್ಲುವುದೆಂದರೆ ವಿಜಯ ವಿಟ್ಠಲನ ಗುಡಿ. ಇದರಷ್ಟು ಸುಂದರವಾದ ಗುಡಿಯು ಉಳಿದೆಡೆಗಳಲ್ಲೆಲ್ಲಿಯೂ ನೋಡಲಿಕ್ಕೆ ದೊರೆವುದು ಅಪರೂಪ. ಗುಡಿಯ ಪ್ರಾಕಾರದ ಗೋಡೆಗಳಿಗೆ ಉತ್ತರ ದಕ್ಷಿಣ ಪೂರ್ವದಿಕ್ಕುಗಳಲ್ಲಿ ಪ್ರವೇಶ ದ್ವಾರಗಳುಂಟು. ಈ ಮೂರೂ ಮಹಾದ್ವಾರಗಳೀಗ ಬಿದ್ದಿವೆ. ಹೊರ ಗಿನಿಂದ ನೋಡಿದವರಿಗೆ ಅಯ್ಯೋ ಇದೇಯೋ ಇಷ್ಟೊಂದು ಜನರೆಲ್ಲ ಹೊಗಳುವ ಗುಡಿ ಎಂದೆನಿಸಬಹುದು. ಆದರೆ ಒಳಗೆ ಪ್ರವೇಶಿಸಿದ ಮೇಲೆ ಆ ಭಾವನೆಯು ಎಲ್ಲಿಯೊ ಓಡಿಹೋಗುವುದು. ಗುಡಿಯ ಒಳಗೂ ಹೊರಗೂ ಕೂಡಿ ೨೩ಕ್ಕೆ ಕಡಿಮೆಯಲ್ಲದಷ್ಟು ಶಿಲಾಲೇಖಗಳಿವೆ. ಅವೆ ಲ್ಲವು ಕ್ರಿ. ಶ. ೧೫೧೩-೧೫೬೪ರೊಳಗಿನವು. ಗುಡಿಯಲ್ಲಿಯ ಒಂದು ಶಾಸನದಿಂದ ಕೃಷ್ಣದೇವರಾಯನು ೧೫೧೩ರಲ್ಲಿ ಗುಡಿಯನ್ನು ಕಟ್ಟಲು ಪ್ರಾರಂಭಿಸಿದನೆಂದು ತಿಳಿಯುತ್ತದೆ. ಉಳಿದ ಶಾಸನಗಳು ಗುಡಿಗೆ ಅರಸುಮನೆತನದವರು ಕೊಟ್ಟ ದತ್ತಿಗಳ ಸಂಬಂಧವಾಗಿವೆ. ಗುಡಿಯ ಕೆಲಸವು ರಾಕ್ಷಸತಂಗಡಗಿಯ ಕಾಳಗವಾಗಿ ವಿಜಯನಗರವು ಹಾಳಾ

ಗುವವರೆಗೂ ಒಂದೇಸವನೆ ನಡೆದೇ ಇದ್ದಿತು. ಅವರ ತರುವಾಯ ಅರ್ಧಕ್ಕೆಯೆ ನಿಂತುಹೋಯಿತು. ಗುಡಿಯು ಕೆಲಸವು ಪೂರ್ಣವಾಗಿದ್ದರೆ ಇನ್ನೂ ಅದಾವ ಸೊಬಗನ್ನು ಬೀರುತಿದ್ದಿತೊ ಏನೋ! ಗುಡಿ ಕಟ್ಟುವ ಕೆಲಸವು ಅರ್ಧಕ್ಕೆಯೆ ನಿಲ್ಲಲಿಕ್ಕೆ ಬೇರೊಂದು ಕಾರಣವಾಯಿತೆಂದು ಭಾವಿಕ ಜನರು ತಿಳಿಯುತ್ತಾರೆ. ಅದೆಂದರೆ ಇದೀಗ ಪಂಢರಪುರದಲ್ಲಿರುವ ವಿಟ್ಠಲಸ್ವಾಮಿಯು ಸಲುವಾಗಿ ಈ ಗುಡಿ ಕಟ್ಟಿದರಂತೆ. ಆ ವಿಟ್ಠಲಸ್ವಾಮಿಯು ತನ್ನ ಸಲುವಾಗಿ ಕಟ್ಟಿದ ಈ ಗುಡಿಯನ್ನು ನೋಡಿ. ಇನಕ್ಕೂ ತಾನೀಗಿರುವ ಸ್ಥಳವೇ ಮೇಲಾಗಿದೆಯೆಂದು ಹೇಳಿ ಅಲ್ಲಿಗೆ ಬರಲು ಅಲ್ಲಗಳೆದನಂತೆ. ಆಗ ಅಷ್ಟಕ್ಕೆಯೆ ಗುಡಿಕಟ್ಟುವ ಕೆಲಸವು ನಿಂತುಬಿಟ್ಟಿತಂತೆ! ಇಂತಹ ಸೊಗಸಾದ ಕಟ್ಟಡವು ತನ್ನಂತಹನಿಗೆ ತಕ್ಕುದಲ್ಲವೆಂದು ಬಿಟ್ಟನೇನೊ! ಅಥವಾ ಮುಂದಾಗುವುದನ್ನು ತಿಳಿದು ತಾನೇಕೆ ಬಂದು ಈ ಪೀಕಲಾಟಿನಲ್ಲಿ ಸಿಗಬೇಕೆಂದು ಬಿಟ್ಟುಕೊಟ್ಟಿದ್ದರೂ ಕೊಟ್ಟಿರಬಹುದು! ಅದೇನೆ ಇರಲಿ ಮೂರ್ತಿಯಿಲ್ಲದುದರಿಂದ ಅಲ್ಲಿಯ ಸೊಬಗಿನಲ್ಲಿ ಒಂದು ದೊಡ್ಡ ಕೊರತೆಯಾಗಿರುವುದೇನೋ ನಿಜ.

ಈ ದೇವಸ್ಥಾನದಲ್ಲಿ ನೋಡಬೇಕಾದುವು ಮುಖ್ಯವಾಗಿ ಮೂರು. ಮುಖದ ಮಹಾಮಂಟಪ, ಕಲ್ಯಾಣಮಂಟಪ, ಕಲ್ಲುರಥ. ಮಹಾಮಂಟಪಕ್ಕೆ ಏರಿಹೋಗಲು ಮೆಟ್ಟಲುಗಳಿವೆ. ಅವುಗಳ ಎರಡೂ ಬದಿಯಲ್ಲಿ ಮುಂಗಾಲುಗಳನ್ನೆತ್ತಿ ನಿಂತಿರುವ ಆನೆಗಳು. ಮೇಲೆ ಹತ್ತಿ ನೋಡಿದರೆ ಸಾಲುಕಂಬಗಳು. ಗರ್ಭಗುಡಿಯ ಬಾಗಿಲವರೆಗೆ ವಿಶಾಲವಾದ ಸ್ತಂಭಮಾರ್ಗವಿದೆ. ಪ್ರತಿಯೊಂದು ಕಂಬದಲ್ಲಿಯೂ ಶರಭಸಾಳ್ವಗಳ ಮೇಲೆ ಕುಳಿತ ಸಹರೆಯವರ ಚಿತ್ರ. ಈ ಕಂಭಗಳಲ್ಲಿ ಶಿಲ್ಪಿಗರು ಇನ್ನೂ ಒಂದು ಬೆರಗುಗೊಳಿಸುವಂತಹ ಜಾಣ್ಮೆಯನ್ನು ತೋರಿಸಿದ್ದಾರೆ.

ಒಂದೊಂದು ಕಂಬದಸುತ್ತಲೂ ಚಕ್ರಾಕಾರವಾಗಿ ೧೩ ಸಣ್ಣಕಂಬಗಳನ್ನು ಮಾಡಿ ಒಂದೊಂದರಲ್ಲಿ ಒಂದೊಂದು ಬಗೆಯ ನಾದವು ಹುಟ್ಟುವಂತೆ ಮಾಡಿದ್ದಾರೆ. ಆ ಸಣ್ಣಕಂಬಗಳನ್ನು ಒಂದೊಂದೇ ಬಾರಿಸುತ್ತಹೋದರೆ ಸ, ರಿ, ಗ, ಮ ಮೊದಲಾದ ಸಪ್ತ ಸ್ವರಗಳು ಹುಟ್ಟುವುವೊ ಎನಿಸುತ್ತಿದೆ. ನೋಡಿದರೆ ಒಂದೇ ಕಲ್ಲಿನಲ್ಲಿ ಕೆತ್ತಿದ ಕಂಬಗಳಿವು. ಇವೇ ಬೇರೆಬೇರೆ ಬಗೆಯ ನಾದವನ್ನು ಹುಟ್ಟಿಸುವುದು ಆಶ್ಚರ್ಯವಲ್ಲವೆ? ಕಂಬದಮೇಲೆ ಸುತ್ತಲೂ ಪಟ್ಟಿಕೆಗಳಲ್ಲಿ ಚಿತ್ರದಕೆಲಸವಿದೆ. ಅಲ್ಲಿ ಕೆತ್ತಿದುವು ರಾಮಾಯಣ ಭಾರತಗಳಲ್ಲಿಯ ಪ್ರಸಂಗಗಳು. ಅದೆಷ್ಟು ಸಾರೆ ನೋಡಿದರೂ ತೃಪ್ತನಾಗದೆ ಇನ್ನೂ ನೋಡಬೇಕು ಇನ್ನೂ ನೋಡಬೇಕು ಎಂದೇ ಎನಿಸುತ್ತದೆ. ಅಲ್ಲಿಯ ಸೊಬಗು ನೋಡುವುದನ್ನು ಬಿಟ್ಟುಬರಲಿಕ್ಕೆ ಕಾಲುಗಳೇ ಏಳುವುದಿಲ್ಲ!


ಈ ಮುಖ್ಯ ಮಂಟಪವನ್ನು ಬಿಟ್ಟು ಕಲ್ಯಾಣ ಮಂಟಪಕ್ಕೆ ಹೋದರೆ ಇದಕ್ಕೂ ಹೆಚ್ಚಿನ ಜಾಣ್ಮೆಯಕೆಲಸ. ಅಲ್ಲಿಯೂ "ಮುಖ ಮಂಟಪದಲ್ಲಿರುವಂತೆಯೆ ಕಂಬದ ಸಾಲುಗಳು; ವಿಶಾಲವಾದ ಮಧ್ಯರಂಗ; ಅಕ್ಕಪಕ್ಕಗಳಲ್ಲಿ ನಾಲ್ಕೂಕಡೆಗೆ ಉಪರಂಗಗಳು; ಒಂದೊಂದು ಕಂಭವೂ ಒಂದೊಂದೇ ಕಲ್ಲಿನಿಂದ ಕಡೆದು ಕೆತ್ತಿ ಮಾಡಿದಂತಹದು. ನಿಲುಕಂಭದ ಅಡಿಭಾಗದಲ್ಲಿ ಒಳಮುಖನಾಗಿ ಸಿಂಹಜಾತಿಯ ಮೃಗಗಳು; ಮಧ್ಯದಲ್ಲಿ ಪೀಠದಮೇಲೆ ಹೊರಮುಖನಾಗಿ ನಾಲ್ಕೈದು ಶಿಲಾದಂಡಗಳು; ಒಳಭಾಗದಲ್ಲಿ ಶರಭಾರೂಢರಾದ ಸವಾರರು. ಮಂಟಪದ ನಾಲ್ಕೂಕಡೆಯೂ ಹೀಗೆಯೆ. ವಿಧವಿಧವಾದ ನಯಗೆಲಸಗಳಿಂದ, ಶಿಲ್ಪಾಭರಣ ಚಮತ್ಕೃತಿಗಳಿಂದ ಕೆತ್ತಿ ಸಿಂಗರಿಸಲ್ಪಟ್ಟಿರುವ ಸ್ತಂಭವೇದಿಕೆಗಳು. ಮೇಲ್ಗಡೆ ಮಾಳಿಗೆಯ ಮೂಲೆವಾಟಗಳಲ್ಲಿ ಲೋವೆ ಕಲ್ಲುಗಳಮೇಲೆ ಪಕ್ಷಿಯ ರೆಕ್ಕೆಗಳಂತೆ ಶಿಲ್ಪಕೆಲಸ. ಲೋವೆಯ

ಕೆಳಗೆ ಲಾಂದರಗಳನ್ನು ತಗುಲಿ ಹಾಕುವುದಕ್ಕಾಗಿ ಮಾಡಿದ ಕಲ್ಲಿ ಉಂಗುರುಗಳು. ಉತ್ತಮವಾದ ಸಹಜ ಸೌಂದರ್ಯವನ್ನು ವೃದ್ಧಿ ಮಾಡಲು ಅಂಗಾಂಗಗಳಿಗನುಗುಣವಾದ ಉಡಿಗೆತೊಡಿಗೆಗಳನ್ನು ಹಾಕಿ ಅಲಂಕರಿಸುವಂತೆ ಮಂಟಪದ ಒಳಮಾಳಿಗೆಯ ಪ್ರತಿಭಾಗವೂ ಸ್ಫುಟ ವಾಗಿ ಕಂಡು ಶೋಭಿಸುವಂತೆ—ಹಸುರು, ನೀಲಿ, ಗುಲಾಬಿ, ಕೆಂಪು ಇತ್ಯಾದಿ ಬಣ್ಣಗಳಿಂದ ಅವನ್ನು ಹೆಚ್ಚು ಉಜ್ವಲವಾಗಿ ಕಾಂತಿಯುತ ವಾಗಿ ಮಾಡಿದ್ದಾರೆ.'' * ಯಾವ ಚಕ್ರವರ್ತಿಯ ವಿವಾಹಮಂಟಪ ದಲ್ಲಿಯೂ ಇಷ್ಟೊಂದು ಶಿಲ್ಪಕೌಶಲವಿರುವುದು ಶಕ್ಯವಿಲ್ಲ! ಆದ ರೇನು! ಎಲ್ಲಕಡೆಗಾಗುವಂತೆ ಇಲ್ಲಿಯೂ ಶಿಲ್ಪಚಾತುರ್ಯವನ್ನು ತೋರಿಸಿದ ಅದೆಷ್ಟೋ ಭಾಗವು ಒಡೆದು ನಾಶವಾಗಿ ಹೋಗಿದೆ. ಎಂತಹ ಸೌಂದರ್ಯಕ್ಕೂ ಶಾಶ್ವತೆ ಇಲ್ಲವಲ್ಲವೆ? ಅದಕ್ಕೆ ಒಂದಿ ಲ್ಲೊಂದು ದಿನ ನಾಶವು ಕಟ್ಟಿಟ್ಟುದಲ್ಲವೆ!

ಗುಡಿಯು ಅದೆಷ್ಟು ಬೆರಗುಗೊಳಿಸುವಂತಹದಿರುವುದೊ ಅಷ್ಟೆ ಅದರ ಮುಂದಿರುವ ಕಲ್ಲುರಥವೂ ಬೆರಗುಗೊಳಿಸುವಂತಹದಿರುತ್ತದೆ. ಈ ರಥವು ಒಂದೇ ಬಂಡೆಗಲ್ಲಿನಲ್ಲಿ ಕೊರೆದಂತಹದೆಂದು ಹಲವರ ಹೇಳಿಕೆ. ಅದರಲ್ಲೇನು ತಥ್ಯಾಂಶವಿಲ್ಲ ಅಚ್ಚು ಗಾಲಿ ಮೇಲಂತಸ್ತು ಎಲ್ಲವೂ ಕಲ್ಲಿನವಿದ್ದು ಅದರ ಮೇಲೆಯೂ ಕೆತ್ತಿಗೆಯ ಕೆಲಸವಿದೆ. ಎಲ್ಲವೂ ಕಟ್ಟಿಗೆಯಲ್ಲಿ ಕೆತ್ತಿದಷ್ಟು ಚೊಕ್ಕಟವಾಗಿದೆ.

ಈ ಗುಡಿಯ ಮುಂದೆಯೂ ವಿಸ್ತಾರವಾದ ತೇರುಬೀದಿಯಿದೆ. ನಾಲ್ಕೂಕಡೆಗೆ ದೇವಸ್ಥಾನಗಳು. ಈಗ ಅವೆಲ್ಲವೂ ಹಾಳು ಬಿದ್ದು ಹೋಗಿವೆ. ಅಲ್ಲಿಯ ಮೂರ್ತಿಗಳ ಕೈ ಒಂದುಕಡೆಗೆ ಕಾಲೊಂದು ಕಡೆಗೆ; ರುಂಡವೊಂದು ಕಡೆಗೆ ಮುಂಡವು ಬೇರೊಂದು ಕಡೆಗೆ; ಕಣ್ಣೊಂದು ಕಡೆಗೆ

* ಪಂಪಾಯಾತ್ರೆ. ಪುಟ ೨೯.



ಶ್ರೀವಿಜಯವಿಟ್ಠಲನ ಗುಡಿ.

ಕಣ್ಣಿನ ಕೊಳಪ್ರೊಂದುಕಡೆಗೆ; ಹೀಗೆ ಭಿನ್ನಭಿನ್ನವಾಗಿ ಬಿದ್ದುಬಿಟ್ಟಿವೆ. ಅವುಗಳ ಮೇಲೆಲ್ಲ ಪೊದೆಗಳು ಮುಳ್ಳುಕಂಟಿಗಳು ಯಥೇಷ್ಟವಾಗಿ ಹಬ್ಬಿ ಹೋಗಿವೆ. ಶ್ಮಶಾನವತ್ತಾದ ಆ ಪ್ರದೇಶವನ್ನು ನೋಡುತ್ತಲೆ ದುಃಖಾಶ್ರುಗಳು ತಮ್ಮಿಂದ ತಾವೇ ಹೊರಹೊಮ್ಮುವುವು. ಹಾಗೆಯೆ ಪೂರ್ವಕ್ಕೆ ನಾವು ಸಾಗಿದರೆ ಕಮಲಾಪುರದಿಂದ ಆನೆಗುಂದಿಗೆ ಹೋಗುವ ದೊಡ್ಡ ಹಾದಿಗೆ ಬಂದು ಕೂಡುವೆವು.

( ೭ )

ಕಮಲಾಪುರದಿಂದ ಆನೆಗುಂದಿಗೆ ಹೋಗುವ ದಾರಿಗುಂಟ ನಾವು ಸಾಗಿದರೆ ಅಲ್ಲಿಯೇ ದಾರಿಗೆ ಹೊಂದಿ ನದಿಯ ದಂಡೆಯ ಮೇಲೆ ತಳೀಗಟ್ಟಿದ ನೆರೆಯ ಶ್ಮಶಾನ ಪ್ರದೇಶವು ದೃಷ್ಟಿಗೆ ಬೀಳುವುದು. ಅದನ್ನೀಗ ವಾಲಿಯ ದಹನಸ್ಥಳವೆಂದು ತೋರಿಸುವರು. ಅಲ್ಲಿ ಈಗ ಸಹ ಎಲುಬು ಬೂದಿಗಳ ಅವಶೇಷಗಳು ಕಾಣುವವು. ಅದೆಲ್ಲವೂ ವಾಲಿಯ ಅವಶೇಷವೆಂದು ಜನರು ಹೇಳುವರು. ಇದು ನಿಜವಾಗಿಯೂ ವಿಜಯನಗರದ ಶ್ಮಶಾನ. ವಾಲಿಯ ದಹನವು ಈ ಸ್ಥಳದಲ್ಲಿ ಆಗಿರಬಹುದು ಆಗಿರಲಿಕ್ಕಿಲ್ಲ. ಆದರೆ ಅನೇಕ ಪತಿವ್ರತೆಯರು ಸತಿಹೋದ ಪವಿತ್ರ ಸ್ಥಳವದು. ಭಾವಿಕಜನರ ಭಾವನೆಯಂತೆ ಹೇಗಿದ್ದರೂ ಅದು ಪವಿತ್ರ ಸ್ಥಳವೆ. ಆ ಪವಿತ್ರತೆಯಲ್ಲಿ ಕುಂದು ಬರುವಂತಿಲ್ಲ. ಯಾವನೊಬ್ಬ ಗಂಡಸು ಸತ್ತರೆ ತೀರಿತು; ಅವನಿಗೆ ಒಬ್ಬಳಿರಲಿ ಇಬ್ಬರಿರಲಿ ನೂರುಜನರಿರಲಿ ಸಾವಿರಜನರಿರಲಿ ಎಲ್ಲ ಸ್ತ್ರೀಯರೂ ಅವನ ಮೃತದೇಹದ ಕೂಡ ಈ ಸ್ಥಳದಲ್ಲಿ ಚಿತೆಯನ್ನೇರುತಿದ್ದರು. ಈ ಸತಿಹೋಗುವ ಕ್ರಮವನ್ನು ನೂನೀಜನೂ ವರ್ಣಿಸಿದುದಿಂತು.

'' ಈ ಜನರಲ್ಲಿ ( ವಿಜಯನಗರದ ಜನರಲ್ಲಿ ) ಪುರುಷನ ಮೃತ

ದೇಹದಕೂಡ ಆತನ ಸ್ತ್ರೀಯರೂ ಚಿತೆಯನ್ನೇರುವ ರೂಢಿಯಿದೆ. ಅದೊಂದು ದೊಡ್ಡ ಸನ್ಮಾನದ ಕೆಲಸವೆಂದೇ ತಿಳಿಯುವರವರು. ಮೃತನ ಹೆಂಡತಿಯು ಇನ್ನಿತರ ಆಪ್ತರೊಡನೆ ವಿಶೇಷ ದುಃಖವನ್ನು ಸಹ ತೋರಗೊಡುವುದಿಲ್ಲ. ಹಾಗೆ ವಿಶೇಷ ದುಃಖ ತೋರಿಸಿದರೆ ಅವಳ ಮನದಲ್ಲಿ ತನ್ನ ಗಂಡನ ಸೇವೆಗೆ ಹೋಗುವುದಿಲ್ಲವೆಂದು ತಿಳಿಯುವರು. ಶೋಕವನ್ನು ಆವರಿಸಿದ ಮೇಲೆ ಅವಳ ಆಪ್ತರು ಅವಳಿಗೆ 'ಸಹ ಗಮನಕ್ಕೆ ಸಿದ್ಧಳಾಗು. ಹಿಂದೆ ನಿಂತು ನಮ್ಮ ಕುಲಕ್ಕೆ ಕಲಂಕವನ್ನು ಹಚ್ಚಬೇಡ.' ಎಂದು ಹೇಳತೊಡಗುವರು. ಮೃತನ ದೇಹವನ್ನು ಒಂದು ಹಾಸಿಗೆಯ ಮೇಲಿರಿಸಿ ಮಂಟಪವನ್ನು ಕಟ್ಟಿ ಹೂವಮಾಲೆ ಗಳನ್ನು ಹಾಕುವರು. ಮೃತನ ಹೆಂಡತಿಯನ್ನು ಒಂದು ಬಡತಟ್ಟಿನ ಮೇಲೆ ಕುಳ್ಳಿರಿಸುವರು. ಅವಳ ಮೈಮೇಲೆ ಆಭರಣಗಳನ್ನಿರಿಸಿ ಒಂದು ಕೈಯ್ಯಲ್ಲಿ ಹೂಗಳಿದ್ದ ಒಂದು ತೊಂಗಲವನ್ನೂ ಇನ್ನೊಂದು ಕೈಯಲ್ಲಿ ಕನ್ನಡಿಯನ್ನೂ ಕೊಡುವರು. ಅನೇಕ ತರದ ವಾದ್ಯಗಳನ್ನು ಬಾರಿಸುತ್ತ ಮೆರವಣಿಗೆಯೊಂದಿಗೆ ಹೋಗುವರು. ಎಲ್ಲರಿಗೂ ಮುಂದೆ ಒಬ್ಬನು ದಮುಡಿಯನ್ನು ಬಾರಿಸುತ್ತ ಹಾಡುತ್ತ ಭಜನೆ ಮಾಡುತ್ತ ಹೋಗುವನು. ಅವನು ತನ್ನ ಹಾಡಿನಲ್ಲಿಯೇ 'ನೀನು ನಿನ್ನ ಗಂಡನ ಬಟ್ಟೆಗೆ ಹೋಗುತ್ತಿರುವೆ' ಎಂದು ಹೇಳುತ್ತಿರುವನು. ಅವನು ಹಾಗೆ ಹೇಳಿದಸಾರೆಗೊಮ್ಮೆ ಸತಿಹೋಗುವವಳು 'ಹೌದು ನಾನು ಅದ ಕ್ಕಾಗಿಯೆ ನಡೆದಿರುವೆನು' ಎಂದು ಉತ್ತರ ಕೊಡುವಳು. ಎಲ್ಲರೂ ಶ್ಮಶಾನಕ್ಕೆ ಹೋದ ಮೇಲೆ ಶವದ ದಹನವಾಗುವ ವರೆಗೆ ಭಜನೆ ಮಾಡುವವರ ಮಧ್ಯದಲ್ಲಿಯೇ ಆ ಸ್ತ್ರೀಯು ಇರುವಳು.

ಚಿತೆಗಾಗಿ ಒಂದು ದೊಡ್ಡ ತಗ್ಗು ಮಾಡುವರು. ಅದರಲ್ಲಿ ಕಟ್ಟಿಗೆಗಳನ್ನೊಟ್ಟಿ ಅಗ್ನಿ ಮಾಡುವರು. ಆ ಅಗ್ನಿಯಲ್ಲಿ ಮೃತನ

ದೇಹದ ದಹನವಾಗುವುದು. ಅಗ್ನಿ ಸಂಸ್ಕಾರವಾಗುವ ಪೂರ್ವದಲ್ಲಿ ಮೃತನ ಹತ್ತಿರದ ಸಂಬಂಧಿಕರು ತಲೆಯ ಮೇಲೊಂದು ನೀರಿನ ಗಡಿಗೆಯನ್ನು ಹೊತ್ತುಕೊಂಡು ಕೈಯಲ್ಲಿಂದು ಪಂಜು ತೆಗೆದುಕೊಂಡು ಚಿತೆಯ ಸುತ್ತಲು ಮೂರು ಪ್ರದಕ್ಷಿಣೆ ಮಾಡುತ್ತಾರೆ. ಪ್ರತಿಯೊಂದು ಪ್ರದಕ್ಷಿಣೆಗೂ ಮಡಿಕೆಗೆ ಒಂದೊಂದು ತೂತು ತೆಗೆಯುವರು. ಮೂರುಸಾರೆ ಪ್ರದಕ್ಷಿಣೆಗಳಾದ ಮೇಲೆ ಆ ಮಡಕೆಯನ್ನು ಒಡೆದು ಚೆಲ್ಲುವರು. ಶವದ ದಹನವಾದ ಮೇಲೆ ಸಹಗಮನ ಹೋಗುವವಳು ಮುಂದೆ ಬಂದು ಪಾದಪ್ರಕ್ಷಾಲನ ಮಾಡಿಕೊಳ್ಳುವಳು. ಬ್ರಾಹ್ಮಣನೊಬ್ಬನು ಅವಳಿಂದ ಧಾರ್ಮಿಕ ವಿಧಿಗಳನ್ನು ಮಾಡಿಸುವನು. ಆ ಮೇಲೆ ಅವಳು ತನ್ನ ಮೈಮೇಲಿನ ಆಭರಣಗಳನ್ನು ತೆಗೆದು ತನ್ನ ಆಪ್ತಸ್ತ್ರೀಯರಲ್ಲಿ ಹಂಚಿ ಬಿಡುವಳು. ಮಕ್ಕಳೊಂದಿಗಳಾಗಿದ್ದರೆ ತನ್ನ ಮಕ್ಕಳನ್ನು ಚೆನ್ನಾಗಿ ಲಾಲನೆಪಾಲನೆ ಮಾಡುವಂತೆ ಮನೆಯ ಹಿರಿಯರಿಗೆ ಹೇಳುವಳು. ಉಟ್ಟವಸ್ತ್ರವನ್ನು ಸಹ ಕಳೆದು ಒಂದು ಕೇಶರಬಣ್ಣದ ವಸ್ತ್ರವನ್ನುಡುವಳು. ಅವಳ ಸಂಬಂಧಿಕರೊಬ್ಬರು ಅವಳ ಕೈಯೊಂದನ್ನು ಹಿಡಿಯುವರು. ಎರಡನೆಯ ಕೈಯಲ್ಲಿ ತುಳಸಿಯ ಅಗೆಯೊಂದಿರುವುದು; ಹಾಡುತ್ತ ಭಜನೆಮಾಡುತ್ತ ಚಿತೆಯ ವರೆಗೆ ಓಡಿಹೋಗಿ ಅದರ ಹತ್ತರ ಇರುವ ಎತ್ತರದ ಕಟ್ಟೆಯ ಮೇಲೆ ನಿಲ್ಲುವಳು. ಆ ಕಟ್ಟೆಯ ಮೇಲಿರುವಾಗ ಚಿತಾಗ್ನಿಯು ಅವಳ ದೃಷ್ಟಿಗೆ ಬೀಳಬಾರದೆಂದು ನಡುವೆ ಒಂದು ಪರದೆಯನ್ನು ಹಿಡಿದಿರುವರು. ಇಷ್ಟವಳು ಚಿತೆಯನ್ನೇರುವವಳು. ಆದರೆ ಆ ಮೊದಲೇ ಅಕ್ಕಿಯ ತಟ್ಟೆಯೊಂದು, ಅವಳ ದಿನದ ಹಣಿಗೆಕನ್ನಡಿ, ತಾಂಬೂಲದ ಗಂಟೊಂದು ಚಿತೆಯಲ್ಲಿ ಒಗೆಯುವರಂತೆ. ಗಂಡನನ್ನು ಕೂಡಿದ ಬಳಿಕ ಇವುಗಳ ಉಪಯೋಗವಾಗಬೇಕೆಂದು ಹಾಗೆ ಅಗ್ನಿಯಲ್ಲಿ ಒಗೆಯುವುದು.

ಇಷ್ಟೆಲ್ಲ ಆದಮೇಲೆ ಆವಳು ಎಲ್ಲರ ಸಿರೋಪವನ್ನು ತೆಗೆದುಕೊಂಡು ತಲೆಯ ಮೇಲೊಂದು ಎಣ್ಣೆಯ ಪಾತ್ರೆಯನ್ನು ಹೊತ್ತುಕೊಂಡು ಶಾಂತ ಚಿತ್ತಳಾಗಿ ಒಳ್ಳೇ ಧೈರ್ಯದಿಂದ ಆ ಅಗ್ನಿ ಕುಂಡದಲ್ಲಿ ಹಾರಿ ಕೊಳ್ಳುವಳು. ಅದನ್ನು ನೋಡಿದರೆ ಒಳ್ಳೇ ಆಶ್ಚರ್ಯವಾಗುವುದು. ಆಪ್ತೇಷ್ಟರು ತಮ್ಮ ಕೈಯಲ್ಲಿದ್ದ ಅಗ್ನಿ ಕಾಷ್ಠಗಳನ್ನು ಚಿತೆಯಲ್ಲೊಗೆದು ಶೋಕಾಕ್ರೋಶಮಾಡುವರು. ಯಾವನೊಬ್ಬನು ಸರದಾರ ಸೇನಾಪತಿ ಯಿದ್ದರೆ, ಇಲ್ಲವೆ ದೊಡ್ಡ ಮನುಷ್ಯನು ಸತ್ತಿದ್ದರೆ ಅವನ ಎಲ್ಲ ಹೆಂಡಿರೂ ಈ ಪ್ರಕಾರ ಸತಿಹೋಗುವರು. ಅರಸು ಸತ್ತಾಗಲೂ ಹೀಗೆಯೆ."

ಹೀಗೆ ಅದೆಷ್ಟೋ ಪತಿವ್ರತೆಯರ ರಕ್ತದಿಂದ ಪವಿತ್ರವಾದ ಸ್ಥಳ ವನ್ನು ನೋಡಿಕೊಂಡು ನಾವು ಆನೆಗುಂದಿಯ ಭಾಗವನ್ನು ನೋಡುವು ದಕ್ಕಾಗಿ ದೋಣಿಯನ್ನು ದಾಟುವುದಕ್ಕೆ ಹೋಗಬಹುದು.

(೮)

ಆನೆಗುಂದಿಯು ವಿಜಯನಗರ ಸಾಮ್ರಾಜ್ಯದ ಮೂಲಸ್ಥಳವೆಂದರೂ ಅಡ್ಡಿಯಿಲ್ಲ. ಅಲ್ಲಿಯ ಜಂಬುಕೇಶ್ವರನು ಯುದ್ಧದಲ್ಲಿ ಮರಣ ಹೊಂದಿದ ತರುವಾಯವೆ ವಿದ್ಯಾರಣ್ಯರಲ್ಲಿ ಹೊಸ ಸಾಮ್ರಾಜ್ಯದ ಕಲ್ಪನೆ ಬಂದುದು. ಈಗಲೂ ಈ ಆನೆಗುಂದಿಯಲ್ಲಿ ವಿಜಯನಗರದ ರಾಜವಂಶವು ಚಿಕ್ಕದೊಂದು ಜಹಗೀರಿನ ಒಡೆತನವನ್ನು ಮಾಡಿಕೊಂಡಿದೆ. ಅದೇನು ಸ್ವತಂತ್ರ ಸಂಸ್ಥಾನವಲ್ಲ. ನಿಜಾಮನ ಕೈಕೆಳಗಿನ ಒಂದು ಜಹಗೀರು. ಹೇಗಿದ್ದರೂ ಕನ್ನಡಿಗರಿಗೆ ಇದು ಕರ್ಣಾಟಕಸಾಮ್ರಾಜ್ಯದ ರಾಜ ವಂಶವೆಂದು ಅಭಿಮಾನ ಹಿಡಿಯಲಿಕ್ಕೆ ಒಂದು ಸ್ಥಳವಿದೆ. ಅಷ್ಟರಿಂದಲೇ ಆ ಆನೆಗುಂದಿಯನ್ನೂ ಅಲ್ಲಿಯ ಅರಮನೆಗಳನ್ನೂ ನೋಡುವುದು. ಆದರೆ ಆನೆಗುಂದಿಯ ಕಡೆಗೆ ನಿಜವಾಗಿಯು ನೋಡ ಬಂದುದು

ಆ ಊರನ್ನಲ್ಲ; ಆ ಅರಮನೆಯನ್ನೂ ಅಲ್ಲ. ವಿಜಯನಗರದಲ್ಲಿ ನೋಡಿದಂಥ ಕಟ್ಟಡಗಳನ್ನು ನೋಡುವುದಕ್ಕೂ ಅಲ್ಲ. ರಾಮಾಯಣದಲ್ಲಿ ಪ್ರಸಿದ್ಧಿಪಡೆದ ಬೆಟ್ಟದ ಸಾಲುಗಳನ್ನು! ಪಂಪಾಸರಸ್ಸನ್ನು ! ಊರನ್ನು ಬಿಟ್ಟು ಬೆಟ್ಟದ ಸಾಲಿನಲ್ಲಿ ಹೊರಟರೆ ಅದೊಂದು ಕಡೆಗೆ ಶಬರಿಯ ಆಶ್ರಮ. ಅದಕ್ಕೆ ಮುಂದೆ ಹೋದರೆ ವಾಲಿಸುಗ್ರೀವರು ಕಿಷ್ಕಿಂಧೆಗಾಗಿ ಹೋರಾಡಿದ ಪ್ರದೇಶಗಳು. ವಾಲಿಯು ಸುಗ್ರೀವನನ್ನು ಸೆರೆಯಲ್ಲಿಟ್ಟದ್ದ ಕಾರಾಗಾರ, ವಾಲಿಯ ಭಂಡಾರ, ಸುಗ್ರೀವನ ರಾಜ್ಯಕಾರ್ಯಸ್ಥಾನ. ಅದಕ್ಕೆ ನೆರೆಯಲ್ಲಿಯೇ ಅಣ್ಣತಮ್ಮಂದಿರೊಳಗೆ ಘನಘೋರ ಯುದ್ಧವಾಗಿ ಕಪಿರಕ್ತದ ಕಾಲುವೆಯು ಹರಿದ ಸ್ಥಳ. ಎಡಬದಿಯಲ್ಲಿಯೇ ರಾಮದೂತನಾದ ಹನುಮಂತನ ಜನ್ಮಸ್ಥಳವಾದ ಅಂಜನಾಬೆಟ್ಟ. ಈ ಕಡೆಯಲ್ಲಿ ನೋಡುವುದು ಒಂದು ಅರಮನೆಯಲ್ಲ ಕೋಟೆಕೊತ್ತಳವಲ್ಲ; ಅವುಗಳ ಅವಶೇಷಗಳಮೇಲಿಂದ ಹೀಗಿರಬೇಕೆಂದು ಕಲ್ಪಿಸುವಂತೆಯೂ ಇಲ್ಲ. ಒಂದು ಬೆಟ್ಟದ ಡೊಗರೇ ವಾಲಿಯ ಭಾಂಡಾರ. ಇನ್ನೊಂದು ಗವಿಯಂತಿರುವ ಸ್ಥಳವೇ ಸುಗ್ರೀವನ ರಾಜ್ಯಕಾರ್ಯಸ್ಥಳ. ಆಂಜನೇಯನ ಜನ್ಮಸ್ಥಳವೆಂದು ಕಾಣುವುದು ಬೆಟ್ಟದ ಮೇಲಿನ ಒಂದು ಬಂಡೆಗಲ್ಲು! ಆದರೆ ಆ ಸ್ಥಳಗಳ ಮೇಲೆ ನಿಂತರೆ ಅಲ್ಲಿ ನಡೆದ ಪ್ರಸಂಗಗಳು ಕಣ್ಣಮುಂದೆ ಕಟ್ಟುವಂತಾಗುವುದೇನು ಸುಳ್ಳಲ್ಲ.

ಮುಂದಕ್ಕೆ ಸಾಗಿದರೆ “ಅಂಜನಾಪರ್ವತದ ತಪ್ಪಲಲ್ಲಿ ತಿಳಿಹಸುರಿನ ಮೃದು ಚೌಕಟ್ಟಿನಲ್ಲಿ ನೆಲೆಸಿರುವ ಪ್ರಶಾಂತ ಪಂಪಾಸರಸ್ಸು! ಆ ದಿವ್ಯ ಸರಸ್ಸನ್ನು ಕಂಡೊಡನೆ ಮನಸ್ಸಿನ ಎಲ್ಲ ಅಲ್ಪಭಾವನೆಗಳೂ ದೇಹದ ಎಲ್ಲ ತಾಪಗಳೂ ಮಾಯವಾಗಿ ಬಿಡುವವು. ಮೂರು ಕಡೆಯೂ ಸೋಪಾನಗಳಿವೆ. ದಂಡೆಯ ಮೇಲೆ ಸಾಲು ಹೂಗಿಡಗಳು. ಸರಸ್ಸು ಕಮಲಲತೆಗಳಿಂದ ಪೂರ್ಣ ಆಚ್ಛಾದಿತವಾಗಿದೆ. ಶ್ರೀರಾಮನ

ಪದತಲದಿಂದ ಪುನೀತವಾದ ಸರಸ್ಸದು. ಹತ್ತಿರದಲ್ಲಿಯೇ ಇನ್ನೊಂದು ಸರೋವರವಿದೆ. ಮಾನಸಸರೋವರವೆಂದು ಹೆಸರದಕ್ಕೆ. ಸರೋವರದ ನೆರೆಯಲ್ಲಿ ಸೀತಾದೇವಿಯ ದೇವಾಲಯವೊಂದಿದೆ. ಉತ್ತರದಿಂದ ಯಾತ್ರೆಗೆಂದು ಬಂದ ಒಬ್ಬಿಬ್ಬರು ಗೋಸಾವಿಗಳು ಈ ದೇವಾಲಯ ದಲ್ಲಿ ವಾಸವಮಾಡಿಕೊಂಡಿರುವರು. ಅವರೇ ಸರೋವರದ ನೀರು ಕೊಳೆ ಯಾಗದಂತೆ ನೋಡಿಕೊಂಡಿರುವರು ಅಲ್ಲಿಯ ನೀರೊ, ಕುಡಿದೇ ಅದರ ರುಚಿಯನ್ನು ತಿಳಿಯಬೇಕು ! ಅಲ್ಲಿಗೆ ಹೋದಮೇಲೆ ಮನೆಯನೆಲ್ಲ ಬಿಟ್ಟು ಇಲ್ಲಿಯೇ ವಾಸಿಸಿಬಿಡೋಣವೊ ಎನಿಸುತ್ತದೆ. ಬಿಟ್ಟೇಳಬೇಕಾದರೆ ಜೀವದ ಸುತ್ತು ಬಂದಂತಾಗುತ್ತದೆ. ಆದರೆ ಅದೆಷ್ಟು ಹೊತ್ತು ಹಾಗೆಯೇ ಅಲ್ಲಿಕುಳಿತು ಕೊಳ್ಳಲಿಕ್ಕಾದೀತು! ಅದೆಷ್ಟು ಹೊತ್ತು ಪ್ರಪಂಚದ ಚಿಂತೆಯನ್ನು ಬಿಟ್ಟಿರ ಲಿಕ್ಕಾದೀತು! ಮತ್ತೆ "ನಡೆಯಿರಪ್ಪಾ ಹೋಗೋಣ ಎಷ್ಟುದಿವಸಗಳಾ ದುವು ಊರಬಿಟ್ಟು ನಾಳೆಗೆ ಹೊರಟು ಬಿಡೋಣ" ಎಂಬ ಉದ್ಗಾರವು ಬರತಕ್ಕದೆ. ಇದಕ್ಕೆಯೇ ಮಾಯೆಯೆಂದೆನ್ನುವುದು!

ತಿರುಗಿ ಆನೆಗುಂದಿಗೆ ಒಂದು ನದಿಯನ್ನು ದಾಟಿ ಕಮಲಾ ಪುರ ಬಂಗಲೆಗೆ ಬರಬಹುದು. ಆನೆಗುಂದಿಯಿಂದ ಕಮಲಾಪುರ ಬಂಗಲೆಗೆ ಬರುವಾಗ ಹಾದಿಯಲ್ಲಿ ಮಾಲ್ಯವಂತ ಪರ್ವತವು ಹತ್ತು ವುದು. ದೂರದಿಂದಲೇ ಕಾಣುವ ಆ ಪರ್ವತದ ಮೇಲಿನ ಗೋಪು ರವು ಮನವನ್ನಾಕರ್ಷಿಸುವುದು. ಹತ್ತಿ ನೋಡಿದರೆ ರಘುನಾಥದೇವಾ ಲಯ. ಈ ದೇವಾಲಯದಲ್ಲಿಯೂ ಸುಂದರವಾದ ಕೆತ್ತಿಗೆಯ ಕೆಲಸವಿದೆ. ದೇವಾಲಯದಲ್ಲಿ ರಾಮ ಲಕ್ಷ್ಮಣ ಸೀತೆ, ಸನಕ, ಸನಂದನ, ಸನ ತ್ಕುಮಾರ, ಹನುಮಂತ, ರಾಮಾನುಜಾಚಾರ್ಯ ಮೊದಲಾದವರ ಸುಂದರ ಮೂರ್ತಿಗಳಿವೆ. ಗುಡಿಯ ಬಲಭಾಗದಲ್ಲಿಯೂ ಹಿಂಭಾಗ ದಲ್ಲಿಯೂ ನೀರಿನ ಬುಗ್ಗೆಗಳಿವೆ. ಗುಡಿಯ ಹಿಂದಿರುವ ಬುಗ್ಗೆಯ ಎರಡೂ

ಬದಿಗಳಲ್ಲಿ ಅಸಂಖ್ಯವಾದ ಈಶ್ವರಲಿಂಗಗಳೂ ಬಸವಣ್ಣನ ಮೂರ್ತಿಯೂ ಇರುವುವು ಇವೆಲ್ಲವುಗಳಿಂದ ಆ ಪ್ರದೇಶಕ್ಕೆ ವಿಶೇಷ ಸೊಬಗು ಬಂದಿದೆ. ರಾಮಲಕ್ಷ್ಮಣರು ಸೀತೆಯನ್ನು ಹುಡುಕುತ್ತ ಅಲೆವಾಗ ಮಳೆಗಾಲವನ್ನಿಲ್ಲಿ ಕಳೆದರೆಂದು ಹೇಳುವರು. ಹಾಗೆಯೆ ದಾರಿಗುಂಟ ಬರುವಾಗ ಗಾಣಗಿತ್ತಿಯಗುಡಿ, ಭೀಮನಅಗಸೆಗಳನ್ನು ನೋಡಿ ಕೊಂಡು ಕಮಲಾಪುರದ ಬಂಗಲೆಗೆ ಬಂದು ಸೇರಿದರೆ ಹಂಪೆಯ ಯಾತ್ರೆಯು ಮುಗಿದಂತಾಗುವುದು.

ಉಳಿದುವೆನ್ನಲಿಕ್ಕೆ ಇನ್ನೆರಡು ಸ್ಥಳಗಳು. ಅವು ಮೇಲಿನ ಹಾದಿಯಲ್ಲಿ ಹತ್ತಲಿಲ್ಲ. ಅವುಗಳಲ್ಲೊಂದು ಕಮಲಾಪುರದ ಬಂಗ ಲೆಯ ನೆರೆಯಲ್ಲಿರುವ ಪಟ್ಟಾಭಿರಾಮನಗುಡಿ, ಕಮಲಾಪುರದಿಂದ ಹೊಸ ಪೇಟೆಗೆ ಬರುವ ದಾರಿಯಲ್ಲಿ ಹಂಪೆಯ, ಕಡೆಗೆ ಹೋಗುವ ದಾರಿ ಯಬದಿಯಲ್ಲಿ ಕಮಲಾಪುರದ ಹತ್ತರ ಇರುವ ಮುಸಲ್ಮಾನರ ಗುಮ್ಮಟ ಇವುಗಳನ್ನು ನೋಡಿಕೊಂಡೇ ಹೊಸಪೇಟೆಯ ದಾರಿ ಹಿಡಿಯ ಬಹುದು ದಾರಿಗುಂಟ ಬರುವ ಕಲ್ಪನೆಗಳನ್ನೂ ಕಣ್ಣಮುಂದೆ ಬರುವ ಚಿತ್ರಗಳನ್ನು ಆಗಿನ ಮನಸ್ಥಿತಿಯನ್ನೂ ನಾವು ಬಾಯಿಂದೇನು ಹೇಳ ಬೇಕು! ಅವನ್ನನುಭವಿಸಿದವರಿಗೆಯೇ ಗೊತ್ತು!